CC-0. In Public Domain. Digitized by eGangotri

ಹರಿ-ಹರ ದೇವೀ ದರ್ಶನ

[ಭಕ್ತಿ ಗೀತ ಸಂಗ್ರಹ]



ಡಾ. ಎಚ್. ಎ. ಕಟ್ಟಿ

ಪ್ರಸಿದ್ಧ ಹಾರ್ಮೋನಿಯಂ ಕಲಾವಿದರಿಂದ ಹೊಸದೇ ಬಿಡುಗಡೆ
ಯಾಗಲಿರುವ ದೇವತಾ ಸ್ತುತಿ, ಭಕ್ತಿ ಗೀತಗಳ ಸಂಗ್ರಹ

Sri Vidyabharathi Book Centre, Shirgeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಹರಿ–ಹರ–ದೇವೀ ದರ್ಶನ

(ಭಕ್ತಿ ಗೀತೆಗಳು)

Sri Vidya Bharathi
Book Centre:
Bharathi Sringeri:
SRINGERI - 577 139.

ಡಾ. ಎಚ್. ಎ. ಕಟ್ಟಿ

ಮದ್ರಾಸಿನ ಪ್ರಸಿದ್ಧ ಕ್ಯಾಸೆಟ್ ಕಂಪನಿಗಳಿಂದ ಕ್ಯಾಸೆಟ್ ರೂಪದಲ್ಲಿ ಸದ್ಯದಲ್ಲೇ
ಬಿಡುಗಡೆಯಾಗಲಿರುವ ಹಾಡುಗಳು

ಶ್ರೀ ಶೇಷಾಚಲ ಗ್ರಂಥಮಾಲೆ, ಧಾರವಾಡ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಕಾಶಕರು :
ಶೇಷಾಚಲ ಗ್ರಂಥಮಾಲೆ, ಧಾರವಾಡ.

ಪ್ರಥಮ ಮುದ್ರಣ : ೧೯೭೮

©ಡಾ. ಎಚ್. ಎ. ಕಟ್ಟಿ

ಕವಿಗಳ ವಿಳಾಸ :
ಡಾ. ಎಚ್. ಎ. ಕಟ್ಟಿ,
ಎಂ. ಎಸ್ಸಿ., ಪಿಎಚ್. ಡಿ.,
ಪ್ರಾಧ್ಯಾಪಕರು,
ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ,
ಧಾರವಾಡ.

ಮುದ್ರಕರು :
ಪ್ರತಿಭಾ ಮುದ್ರಣ, ಧಾರವಾಡ

Sri Vidyabharathi Book Centre, Sringeri

CC-O. In Public Domain. Digitized by eGangotri

ಅರ್ಪಣ

ಸದಾ ನನ್ನ ಶ್ರೇಯಸ್ಸನ್ನು ಬಯಸಿ, ವಾತ್ಸಲ್ಯದ ಮಳೆಗರೆದ
ನನ್ನ ಪೂಜ್ಯ ಮಾತಾ-ಪಿತೃಗಳಾದ
ದಿ. ಅನಂತಾಚಾರ್ಯ ಹಾಗು ಸೀತಾಬಾಯಿ
— ಇವರಿಗೆ —

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಿವಿಡಿ

ಭಾಗ ೧ : ಹರದರ್ಶನ

೧. ಇಷ್ಟಾರ್ಥದಿಡಗುಂಜಿ ೧
೨. ಇಡಗುಂಜಿಯ ಬೆನಕ ೨
೩. ಭೂಕೈಲಾಸವ ನೋಡಿದಿರಾ ೩
೪. ಗೌರೀಶ ತಾಂಡವವಾಡಿದನು ೪
೫. ವಿಶ್ವನಾಥನ ನ್ಯಾಯಾಲಯ ೫
೬. ಧರ್ಮ-ಧರ್ಮಗಳ ಸಂಗಮ ೬
೭. ಗೌರೀತನಯ ಶೌರಿ ೭
೮. ಕನ್ನಡದ ಗುಡಿಯು ೮
೯. ಹೊಯ್ಸಳೇಶ್ವರ ಈಶ ೯
೧೦. ದರುಶನ ಮಾತ್ರ ಪಾವನ ಸೂತ್ರ ೧೦
೧೧. ಕಡಲೊಡಲ ಕೈಲಾಸ ೧೧
೧೨. ತುಂಗಭದ್ರೆಯ ಸಂಪಹನ ೧೨
೧೩. ಹರಿಹರ ಮಂದಿರ ಸುಂದರ ೧೩
೧೪. ವಿರುಪಾಕ್ಷೇಶ್ವರ ೧೪
೧೫. ಕನ್ನಡ ದೇವಿಯ ಗುಡಿ ೧೫
೧೬. ನಂಜುಂಡನಾಮ ಸ್ಮರಣೆ ೧೬
೧೭. ಹೊಡಿ ನಗಾರಿ ಮ್ಯಾಲ ಕೈಯ ೧೭
೧೮. ಮಧುಕೇಶ್ವರ ೧೮
೧೯. ಏಳುಕೋಟಿ ಮೈಲಾರ ಲಿಂಗ ೧೯
೨೦. ಸೋಮೇಶ್ವರಾ ೨೦
೨೧. ದಶಲಿಂಗ ಓಲಗ ೨೧
೨೨. ಕೂಡಲಸಂಗಮದೇವನ ಸ್ಮರಣೆ ೨೨

Sringeri Knowledge Technology Centre, Sringeri

CC-O. In Public Domain. Digitized by eGangotri

ಭಾಗ ೨ : ಹರಿದರ್ಶನ

೨೩. ದಾಸ ಹೃದಯದಿ ವಾಸ ೨೪
೨೪. ಲಾಲಿ ಲಾಲಿ ಜೋ ಜೋ ಲಾಲಿ ೨
೨೫. ಶಿಲೆಗಳು ಕಲೆಗಳ ನೆಲೆಯಾಗಿ ೨೬
೨೬. ಚೆನ್ನಕೇಶವ ಮಂದಿರ ೨೮
೨೭. ಕಾಗಿನೆಲೆ ಆದಿಕೇಶವ ೨೯
೨೮. ಬಂದೆ ನಿನ್ನ ದರುಶನಕೆ ೩೦
೨೯. ಬಂದೆಯಾ ನರಸಿಂಹ ೩೨
೩೦. ವಿಜಯ ನಗರದ ನಾರಸಿಂಹ ೩೩
೩೧. ವೀರ ಶ್ರೀ ನಾರಾಯಣ ೩೪
೩೨. ಭಕ್ತಿ ಭಾವನಾ ೩೫
೩೩. ಚೆಲುವ ರಾಯನ ಚೆಲುವು ೩೬
೩೪. ಚೆನ್ನಿಗರಾಯನ ಚೆಲುವು ೩೭
೩೫. ಉದ್ಧರಿಸು ತಂದೆ ೩೮
೩೬. ಚೆಲುವ ನೋಡೋಣ ೩೯
೩೭. ಹಯವದನನ ಸದನದಲಿ ೪೦
೩೮. ವಾದಿರಾಜರ ಸನ್ನಿಧಿ ೪೧
೩೯. ಪಂಚಮುಖಿ ಪ್ರಾಣ ದೇವರು ೪೨
೪೦. ಬಂದು ನಿಂದ ನಾನಿರುವೆನೆಂದ ೪೩
೪೧. ಬಳಿಗಿರಿ ರಂಗ ೪೪
೪೨. ಕನ್ನಡದ ಮನೆ ಮನೆಯು ೪೫
೪೩. ಅಪ್ಪ ಯಾಲಗುರದಪ್ಪ ೪೬
೪೪. ಹರಿದಾಸರ ನಾಡು

Sri Vidyabharathi Book Centre, Sringeri

CC-O. In Public Domain. Digitized by eGangotri

ಭಾಗ ೩ : ದೇವೀದರ್ಶನ

೪೫. ತುಂಗಾ ತೀರದಿ ನೆಲೆಸಿದೆಯಮ್ಮ ೪೮

೪೬. ಶೃಂಗ ಗಿರಿಯಲಿ ಶೃಂಗಾರ ಸರಸತಿ ೪೯

೪೭. ಕರ್ನಾಟಕ ಮಾತೆ ೫೦

೪೮. ಚಾಮುಂಡಿ ದಯೆ ತೋರೆ ೫೧

೪೯. ಅಂಬೆ ಮೂಕಾಂಬಿಕೆ ೫೨

೫೦. ಸೌಪರ್ಣಿಕೆ ತೀರದಲಿ ೫೩

೫೧. ಉಗರಗೊಳ್ಳದ ದೇವಿಗೆ ೫೪

೫೨. ಉಧೊ ಉಧೋ ತಾಯಿ ೫೫

೫೩. ದೇವಿ ಶಂಕರಿ ೫೬

೫೪. ಅಮ್ಮಾ ಎಂದ ಕಂದನ ಕರೆಗೆ ೫೭

೫೫. ಮಾರೆಮ್ಮನ ಜಾತ್ರೆ ೫೮

೫೬. ಎಂದು ಕಾಂಬೆನಮ್ಮ ನಿನ್ನ ೫೯

೫೭. ಸಾಣೆ ಕಲ್ಲಲಿ ಉದ್ಭವಿಸಿದೆ ೬೦

೫೮. ಭಾಗ್ಯದ ಲಕ್ಷ್ಮಿ ಬಾರೆ ೬೧

೫೯. ತನು ಎಂಬ ತಂಬೂರಿ ೬೨

೬೦. ಕನ್ನಡದ ಕುಲದೇವಿ ೬೩

೬೧. ಬಾ ತಾಯಿ ಬಾರೆ ೬೪

೬೨. ದೇವಿ ದುರ್ಗೆ ೬೫

೬೩. ಆದಿಶಕ್ತಿ ದುರ್ಗೆ ಪರಮೇಶ್ವರಿ ೬೬

Sri Vidyabharathi Book Centre, Sringeri

CC-O. In Public Domain. Digitized by eGangotri

ಮುನ್ನುಡಿ

ಧಾರವಾಡದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದಲ್ಲಿ ರಸಾಯನ ಶಾಸ್ತ್ರದ ಅಧ್ಯಾಪಕರಾಗಿರುವ ಡಾ. ಎಚ್. ಎ. ಕಟ್ಟಿಯವರು, ಆಕಾಶವಾಣಿ ಹಾಗು ಸಾರ್ವಜನಿಕ ವೇದಿಕೆಗಳಲ್ಲಿ ವೈಜ್ಞಾನಿಕ ವಿಷಯಗಳನ್ನು ಕುರಿತ ತಮ್ಮ ಸುಲಭ ಶೈಲಿಯ ಉಪನ್ಯಾಸಗಳ ಮೂಲಕ ಕೇಳುಗರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ವಿಜ್ಞಾನ ಪ್ರದರ್ಶನಗಳಲ್ಲಿ ಲಲಿತಕಲೆಗಳ ಆಧಾರವನ್ನು ಬಳಸಿಕೊಂಡು, ಅವರು ರೂಪಿಸಿದ ಅನೇಕ ಮಾದರಿಗಳು ನೋಡಿದವರ ನೆನಪಿನಲ್ಲಿ ಉಳಿಯುವಂತಿವೆ. ಇದೆಲ್ಲದರ ಜೊತೆಗೆ ಸಂಗೀತದಲ್ಲಿ ವಿಶೇಷ ಆಸಕ್ತಿ ಹೊಂದಿರುವ ಕಟ್ಟಿಯವರು ಸುಗಮಸಂಗೀತಕ್ಕೆ ಅನುಗುಣವಾದ ಪದ್ಯರಚನೆ ಹಾಗು ರಾಗಸಂಯೋಜನೆಯ ಹವ್ಯಾಸವನ್ನು ಬೆಳೆಸಿಕೊಂಡು ಬಂದಿರುವುದು ಇಲ್ಲಿ ಹೆಚ್ಚು ಪ್ರಸ್ತುತವೆನಿಸಬಲ್ಲುದು. ಎಳೆ ವಯಸ್ಸಿನಲ್ಲಿಯೇ ಸಂಗೀತದಲ್ಲಿ ತುಂಬ ಪ್ರಸಿದ್ಧಿ ಪಡೆದಿರುವ ಕುಮಾರಿ ಸಂಗೀತಾ ಕಟ್ಟಿ ಶ್ರೀಯುತರ ಮಗಳು ಎಂಬುದು ಇನ್ನೂ ಹೆಚ್ಚಿನ ಸಂತೋಷಕ್ಕೆ ಕಾರಣವಾಗಿದೆ.

ಪ್ರಸ್ತುತ ಪದ್ಯಸಂಕಲನಕ್ಕೆ ಕಟ್ಟಿಯವರು ನನ್ನ ಮುನ್ನುಡಿಯನ್ನು ಅಪೇಕ್ಷಿಸಿದಾಗ ನಾನು ಸ್ವಲ್ಪ ಹಿಂಜರಿಯಬೇಕಾಯಿತು. ಸಂಗೀತಪ್ರಧಾನವಾದ ಈ ರಚನೆಗಳ ಬಗ್ಗೆ, ಅದರಲ್ಲಿ ತಜ್ಞರಾದವರ ಅಭಿಪ್ರಾಯಗಳು ಹೆಚ್ಚು ಪ್ರಯೋಜನಕಾರಿಯಾಗಬಹುದೆಂಬುದನ್ನು ಅವರಿಗೆ ಸೂಚಿಸಿದೆ. ಆದರೆ ಅವರು ತಮ್ಮ ನಿಶ್ಚಯವನ್ನು ಬದಲಿಸುವಂತೆ ತೋರಲಿಲ್ಲ. ನನ್ನ ಬಗೆಗೆ ಅವರಿಗಿರುವ ಪ್ರೀತಿ, ವಿಶ್ವಾಸಕ್ಕಾಗಿ ಅವರಿಗೆ ಕೃತಜ್ಞತೆ ಸಲ್ಲಿಸಿ ಈ ಎರಡು ಮಾತುಗಳನ್ನು ಬರೆಯುತ್ತಿದ್ದೇನೆ.

ಕನ್ನಡ ನಾಡಿನಲ್ಲಿರುವ ಹಲವಾರು ತೀರ್ಥಕ್ಷೇತ್ರಗಳನ್ನೂ, ಶಿಲ್ಪಕಲಾಸೌಂದರ್ಯಕ್ಕೆ ಆಗರವೆನಿಸಿದ ದೇವಾಲಯಗಳನ್ನೂ ಶ್ರೀ ಕಟ್ಟಿಯವರು ಆಗಾಗ ಸಂದರ್ಶಿಸಿ, ಜನರಲ್ಲಿ ಜಾಗೃತಿಯನ್ನುಂಟುಮಾಡುವ ಸಂಬಂಧವನ್ನು ಬೆಳೆಸಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಂಡವರು. ಹರಿ ಹರ ಭೇದವಿಲ್ಲದೆ, ಶಕ್ತಿದೇವತೆಗಳನ್ನು ಒಳಗೊಂಡು ಅವರು ವಿಶಾಲ ಭಾವನೆಯನ್ನು ತಾಳಿರುವುದು ಮೆಚ್ಚತಕ್ಕ ಸಂಗತಿ. ಅದಕ್ಕೆ ತಕ್ಕಂತೆ 'ಹರಿ-ಹರ-ದೇವೀದರ್ಶನ' ಎಂಬ ಹೆಸರೂ ಈ ಸಂಗ್ರಹಕ್ಕೆ ಒಪ್ಪುವಂತಿದೆ. ಈ ಕ್ಷೇತ್ರಗಳಿಗಿರುವ ದೈವೀಪ್ರೇರಣೆ, ಪರಂಪರೆಯ ಹಿನ್ನೆಲೆ ಹಾಗು ಅವುಗಳ ಮಹತ್ವದ ಬಗ್ಗೆ ಪ್ರಚಲಿತವಿರುವ ಮಾಹಿತಿಯನ್ನು ಸಂಗ್ರಹಿಸಿ, ಆದನ್ನು ಪದ್ಯರೂಪದಲ್ಲಿ, ಸಂಗೀತಕ್ಕೆ ಒಗ್ಗುವಂತೆ ಅಳವಡಿಸಲು ಶ್ರೀ ಕಟ್ಟಯವರು ಪ್ರಯತ್ನಿಸಿದ್ದಾರೆ; ತಕ್ಕಮಟ್ಟಿಗೆ ಯಶಸ್ಸನ್ನೂ ಪಡೆದಿದ್ದಾರೆ.

ಇವು ಮೂಲತಃ ಭಾವಗೀತಗಳಾಗಿ ಹೊರಹೊಮ್ಮಿದವಲ್ಲವಾದುದರಿಂದ ಇಲ್ಲಿ ಕಲ್ಪನಾವಿಲಾಸಕ್ಕಾಗಲಿ, ಕಾವ್ಯಗುಣಕ್ಕಾಗಲಿ ಅವಕಾಶ ಕಡಿಮೆ. ಆದರೂ ಅಲ್ಲಲ್ಲಿ ಸ್ಫೂರ್ತಗೊಂಡ ಸಾಲುಗಳಿರುವುದನ್ನು ಮುಂದಿನ ಉದಾಹರಣೆಗಳಲ್ಲಿ ಕಾಣಬಹುದು :

" ಶಿಲೆಯಿಂದ ಸಂಗೀತ
ನಾಟ್ಯವಾಡುತ ಬರುವ "

* * *

" ಜೀವಿಗಳಲಿ ಕಾಣದಂಥ ಜೀವಭಾವವು
ಕಲ್ಲಿನಲ್ಲಿ ಕಂಡೆ, ಕಲ್ಲಿನಂತೆ ನಿಂದೆನು " [ಹಳೆಬೀಡು]

* * *

" ಭೋರ್ಗರೆವ ಸಾಗರದಿ ಬುವಿಯು ಬಾನನು ಸೇರಿ
ಕಡಲ ಒಡಲು ಶ್ವೇತ ಶಿಲೆಗಳನು ಸಾರಿ
ಬೆಳದಿಂಗಳ ರಜತ ಕಿರಣಗಳ ತೂರಿ
ಭಕುತರಿಗೆ ಕೈಲಾಸ ದರುಶನವ ತೋರಿ"

[ಕೋಟೇಶ್ವರ–ಮುರ್ಡೇಶ್ವರ]

Sri Vidyabharathi Book Centre, Sringeri

CC-O. In Public Domain. Digitized by eGangotri

"ಗಿರಿಜೆಯು ಬದಿಯಲಿ, ನಂದಿಯು ಎದುರಲಿ
ದೀಪಸ್ತಂಭವು ಮುಟ್ಟಿದೆ ಮುಗಿಲು " [ಬನವಾಸಿ]

* * *

" ಶಿಲೆಗಳು ಕಲೆಗಳ ನೆಲೆಯಾಗಿರುವ
ಕವಿಕಲ್ಪನೆಗಳ ಸೆಲೆಯಾಗಿರುವ
ಚೆಲುವ ಚೆನ್ನಿಗನ ಅಡಿಗೆ
ನಮಿಸಿರಿ ಕನ್ನಡ ಗುಡಿಗೆ " [ಬೇಲೂರು]

* * *

" ಭಗ್ನವಾಯಿತು ನಿನ್ನ ಮೂರುತಿ
ನಗ್ನವಾಯಿತು ಕೀರುತಿ
ವಿಜಯ ವಿದ್ಯಾರಣ್ಯ ಜಯಿಸಿದ
ಪುಣ್ಯ ಸೇರಿತರಣ್ಯವ " [ಹಂಪಿ]

‡ ‡ ‡

" ಕಾವೇರಿ ಧರೆಗಿಳಿದು ನಿನ್ನ ಪಾದವ ತೊಳೆದು
ಧನ್ಯಳಾಗುತ ವರವ ಪಡೆದು ಮುನ್ನಡೆದು
ಕನ್ನಡದ ನೆಲದಲ್ಲಿ ನಿನ್ನ ಮಹಿಮೆಯ ಬಿತ್ತಿ
ಹಸಿರಾಗಿ ಹೊನ್ನ ಬಸಿರಾಗಿ ಮೆರೆದವಳು " [ಶ್ರೀರಂಗಪಟ್ಟಣ]

‡ ‡ ‡

ದಾಸರ ಹಾಡುಗಳ ಪ್ರಭಾವ ಈ ಸಂಗ್ರಹದಲ್ಲಿ ಒಡೆದುಕಾಣುತ್ತಿದ್ದರೂ, ಅಲ್ಲಿಯಂತೆ ಶಾತ್ತ್ರೀಕ ಇಲ್ಲವೆ ನೈತಿಕ ಚಿಂತನೆಗೆ ಎಳಸದೆ ವಿವರಣೆ, ವರ್ಣನೆಗಳಲ್ಲಿ ಮಾತ್ರ ಇವರು ತೃಪ್ತರಾಗುತ್ತಾರೆ. ಹೀಗಾಗಿ ಎಷ್ಟೋ ಕವನಗಳಿಗೆ ಸಹಜವಾದ, ಸಮರ್ಪಕವಾದ ಮುಕ್ತಾಯ ಕಂಡುಬರದೆ ಇರಬಹುದು.

ಈ ಲೇಖಕರೇ ಪ್ರಾಮಾಣಕವಾಗಿ ಹೇಳಿಕೊಂಡಿರುವಂತೆ, ಇದರಲ್ಲಿ ಬರುವ ಕ್ಷೇತ್ರಗಳ ಬಗ್ಗೆ ಅವಶ್ಯಕ ಪ್ರಮಾಣದ ಚಾರಿತ್ರಿಕ ಮಾಹಿತಿಗಳನ್ನು

Sri Vidyabhathi Book Centre, Shimoga

CC-O. In Public Domain. Digitized by eGangotri

ಸಂಗ್ರಹಿಸಿ, ಜನಸಾಮಾನ್ಯರಿಗೆ ತಲುಪಿಸುವ ಅವರ ಪ್ರಯತ್ನ ಮೆಚ್ಚಬೇಕಾದದ್ದೆ. ವಿವಿಧ ಬಗೆಯ ರಾಗ–ತಾಳ-ಲಯಗಳಿಗೆ ಹೊಂದುವಂತೆ ಇವುಗಳ ರಚನೆ ಮಾಡುವಲ್ಲಿ ಅವರ ಸಂಗೀತಜ್ಞಾನ ಸಾಕಷ್ಟು ನೆರವಾಗಿದೆ.

"ಭಕ್ತಿರಸವ ಸುರಿಸಿ ಭಾವ
ತುಂಬಿ ರಾಗ ಬೆರೆಸಿದೆ;
ತಾಳ ತಪ್ಪಿ ನಿಂತ ಬಾಳ
ನೆಲೆಗೊಳಿಸಿದೆ" [ಶರಸಿ ಕ್ಷೇತ್ರ]

ಹೀಗೆ ಭಕ್ತಿ - ಭಾವ–ರಾಗ–ತಾಳ ಮೇಳಗೊಂಡ ಇದರಲ್ಲಿಯ ಹಲವಾರು ಪದ್ಯಗಳು ಹಾಡಿನಲ್ಲಿ ಕೇಳುಗರ ಮನಸ್ಸನ್ನು ಸೂರೆಗೊಳ್ಳಬಹುದೆಂದು ಅನಿಸಿದ್ದೇನೆ.

ಧಾರವಾಡ
ಯುಗಾದಿ : ೧೯೬೮

—ಚೆನ್ನವೀರ ಕಣವಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಸ್ತಾವನೆ

ಸಾಂಸ್ಕೃತಿಕ ಪ್ರಚೋದನೆಗೆ ಸಂಗೀತ ಒಂದು ಪ್ರಭಾವಶಾಲಿ ಮಾಧ್ಯಮವಾಗಿದ್ದು ಭಾವನೆಗಳು ರಾಗಬದ್ಧ, ಪ್ರಾಸಬದ್ಧವಾದ ಶಬ್ದಗಳಲ್ಲಿ ಹೊರ. ಸೂಸಿದಾಗ, ಸಂಗೀತಕಾರರಿಗೆ ಹೊಸ ರಾಗಗಳೇ ಮೂಡಿಬಂದ ಸಂತಸ. ಕನ್ನಡದ ನುಡಿಮುತ್ತುಗಳೆಂಬ ಫಲವನ್ನು ಸಂಗೀತವೆಂಬ ಜೇನಿನಲ್ಲಿ ಆದ್ದಿ ಉಣಬಡಿಸಿದರೆ ಆಗುವ ರಸಾನುಭವ ಅಪೂರ್ವ. ಸಾಹಿತ್ಯ ಹಾಗು ಸಂಗೀತದ ಸುಮಧುರ ಮೇಳ ಜೀವನದಲ್ಲಿ ಹೊಸ ಹುಮ್ಮಸ್ಸು ತುಂಬಬಲ್ಲದು. ಮಕ್ಕಳನ್ನು ನಿದ್ರಾಲೋಕದಲ್ಲಿ ಸಹಜವಾಗಿ ಒಯ್ಯಬಲ್ಲ, ನಿರಾಶಾವಾದಿಗಳಲ್ಲಿ ಆಶೆಯನ್ನು ಚಿಗುರಿಸಬಲ್ಲ, ಮರಳುಗಾಡಲ್ಲಿ ನೀರನ್ನು ಚಿಮ್ಮುವ ಶಕ್ತಿ ಇದರಲ್ಲಿದೆ.

ಕರ್ನಾಟಕ, ಪುಣ್ಯಕ್ಷೇತ್ರಗಳ ತವರುಮನೆ. ಇಲ್ಲಿ ಇವುಗಳಿಗಿದ್ದ ದೈವೀ-ಪ್ರೇರಣೆ ಹಾಗು ಪರಂಪರೆಯ ಹಿನ್ನೆಲೆ, ಕ್ಷೇತ್ರಗಳ ಮಹತ್ವವನ್ನು ದಿನದಿಂದ ದಿನಕ್ಕೆ ವೃದ್ಧಿಗೊಳಿಸುತ್ತಿದೆ. ಅನೇಕ ಕ್ಷೇತ್ರಗಳು ಜೀರ್ಣೋದ್ಧಾರಗೊಂಡಿದ್ದು, ದೇಶ-ವಿದೇಶಗಳಿಂದ ಬರುವ ಯಾತ್ರಾರ್ಥಿಗಳ ಸಂಖ್ಯೆ ಹೊಸ ದಾಖಲೆ ಉಂಟುಮಾಡುತ್ತಿದೆ. ನಾಡಿನ ಶ್ರೀಮಂತ ಸಂಸ್ಕೃತಿಯನ್ನು ಜಗತ್ತಿಗೇ ಆದರ್ಶಪ್ರಾಯವಾಗಿ ಬಿಂಬಿಸುತ್ತಿವೆ. ಇದೇ ರೀತಿ ಕರ್ನಾಟಕದಲ್ಲಿ ಸಂಗೀತದ ಪರಂಪರೆಯೂ ಹರಿದುಬಂದಿದೆ. ಕಾವ್ಯಕ್ಕೂ-ಸಂಗೀತಕ್ಕೂ ಮಕರಂದ—ದುಂಬಿಗಳ ಸಂಬಂಧವಿದ್ದರೆ, ಕರ್ನಾಟಕದ ಕ್ಷೇತ್ರಗಳ ದರ್ಶನ ಈ ದಿಶೆಯಲ್ಲಿ ಹೊಸ ಬೆಳಕನ್ನು ಚಿಮ್ಮುತ್ತಿದೆ. ಸಂಗೀತ, ಸಾಹಿತ್ಯ ಹಾಗು ಪುಣ್ಯಕ್ಷೇತ್ರಗಳ ತ್ರಿವೇಣಿ ಸಂಗಮವಾಗಿ 'ಹರಿ-ಹರ—ದೇವೀ ದರ್ಶನ' ಎಂಬ ಕಿರುಸಂಕಲನವನ್ನು ಹೊರತರುವ ಸಾಹಸಕ್ಕೆ ಕೈಹಾಕಿದ್ದೇನೆ.

ಈ ಸಂದರ್ಭದಲ್ಲಿ ಕವನಸಂಗ್ರಹಕ್ಕೆ ನುಡಿಮುತ್ತುಗಳ ಮುನ್ನುಡಿ ಬರೆದು ಆಶೀರ್ವದಿಸಿದ, ಕನ್ನಡದ ಶ್ರೇಷ್ಠ ಕವಿ ಶ್ರೀ ಜೆನ್ನವೀರ ಕಣವಿಯವರನ್ನು ತುಂಬು ಮನಸ್ಸಿನಿಂದ ನೆನೆಯುತ್ತೇನೆ. ಇದೇ ರೀತಿ ತಮ್ಮ ಅಮೂಲ್ಯ ಅಭಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಾಯಗಳನ್ನು ನೀಡಿ ಪ್ರೋತ್ಸಾಹಿಸಿದ ಕರ್ನಾಟಕ ವಿಶ್ವವಿದ್ಯಾಲಯದ ಹಿಂದಿನ ಕುಲಪತಿಗಳೂ, ಶ್ರೇಷ್ಠ ಸಾಹಿತಿಗಳೂ ಆದ ಶ್ರೀ ಎಸ್. ಎಸ್. ಒಡೆಯರ್, ಭಾರತದ ಅಪ್ರತಿಮ ಸಂಗೀತ ದಿಗ್ಗಜ ಪದ್ಮಶ್ರೀ ಪಂ|| ಬಸವರಾಜ ರಾಜಗುರು, ಪ್ರಸಿದ್ಧ ಸಾಹಿತಿ ಹಾಗು ವಿಮರ್ಶಕ ಶ್ರೀ ಆರೂರ ಲಕ್ಷ್ಮಣ ಶೇಟ್, ಹಿರಿಯ ಕವಿ ಶ್ರೀ ವಿ. ಸಿ. ಐರಸಂಗ್ ಇವರಿಗೆಲ್ಲ ನನ್ನ ಅನಂತ ಕೃತಜ್ಞತೆಗಳು. ಹರಿ-ಹರ-ದೇವೀ ದರ್ಶನಕ್ಕೆ ಅಂದವಾದ ಮುದ್ರಣ, ಮುಖಪುಟಗಳ ದರ್ಶನ ಮಾಡಿಸಿದ ಕನ್ನಡದ ಪ್ರಸಿದ್ಧ ಪ್ರಕಾಶಕರಾದ ಶ್ರೀ ಮನೋಹರ ಘಾಣೇಕರ ಇವರಿಗೆ ನಾನು ಚಿರಋಣಿ. ಯೋಗ್ಯ ಸಲಹೆ. ಗಳನ್ನು ನೀಡಿದ ಸನ್ಮಿತ್ರರಾದ ಎಸ್. ಜಯಸಿಂಹ ಬೆಂಗಳೂರು, ಡಾ. ಎ. ಸಿ. ಅಣ್ಣೀಗೇರಿ ಮತ್ತು ಪ್ರೊ. ಬಿ ಆರ್. ಕೃಷ್ಣಾಪುರ ಆವರಿಗೆ ಧನ್ಯವಾದಗಳು.

ಈ ಕವನಸಂಗ್ರಹಕ್ಕೆ ಮೂಲ ಪ್ರೇರಣೆ ನೀಡಿದ ಕನ್ನಡಿಗ ಶ್ರೀ ಎಚ್. ಎಮ್. ಮಹೇಶ್, ಮಾಸ್ಟರ ರಿಕಾರ್ಡಿಂಗ್ ಕಂ. ಮದ್ರಾಸ ಇವರ ಪ್ರೋತ್ಸಾಹವೇ ಕಾರಣವಾಗಿದ್ದು, ಇಡೀ ಕನ್ನಡ ನಾಡಿಗೆ ಅವರು ಸಲ್ಲಿಸುತ್ತಿರುವ ಅನಂತ ಸೇವೆಯನ್ನು ಸ್ಮರಿಸುತ್ತೇನೆ.

ಸಂಗೀತ ಆರಾಧಕ,

ಡಾ. ಎಚ್. ಎ. ಕಟ್ಟಿ

ಧಾರವಾಡ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಭಿಪ್ರಾಯ

ಡಾ. ಎಚ್. ಕೆ. ಕಟ್ಟಯವರ ಮನೆತನದ ಒಡನಾಟ ನಮ್ಮೊಂದಿಗೆ ಹಲವಾರು ವರ್ಷದ್ದು. ಅವರ ಮನೆತನದವರೆಲ್ಲರೂ ಸುಶಿಕ್ಷಿತರಾಗಿದ್ದಂತೆ ಸುಸಂಸ್ಕೃತರೂ ಹೌದು. ವಿದ್ವತ್ತಿನೊಂದಿಗೆ ನಯವಾದ ನಡೆ-ನುಡಿ, ಧಾರ್ಮಿಕ ಅಭಿವ್ಯಕ್ತಿ, ಸಂಗೀತ-ಸಾಹಿತ್ಯ ಕಲೆಗಳಲ್ಲಿ ಆಸಕ್ತಿ, ಪ್ರಾವೀಣ್ಯತೆಗಳನ್ನು ಅವರು ಬೆಳೆಯಿಸಿಕೊಂಡು ಬಂದಿದ್ದಾರೆ. ಶ್ರೀ ಕಟ್ಟಯವರ ಕಾವ್ಯೋಪಾಸನೆ ಅವರ ಸುಸಂಸ್ಕೃತ ಅಭಿರುಚಿಗಳ, ಸಾಧನೆಗಳ ಒಂದು ಮುಖ. ಆಸ್ತಿಕ ಪರಂಪರೆಯಲ್ಲಿ ಬೆಳೆದುಬಂದ ಅವರು, ಧರ್ಮ, ದೇವರುಗಳ ಬಗ್ಗೆ ಅಚಲ-ಶ್ರದ್ಧೆಯುಳ್ಳವರು. ಅಂತೆಯೇ ನಾಡಿನಾದ್ಯಂತ ಅವರು ದರ್ಶನ ಪಡೆದ ದೇವಾನುದೇವತೆಗಳಲ್ಲಿ ಅವರಿಗೆ ಅಪಾರ ಗೌರವ, ಭಕ್ತಿ. ಅಂಥ ಮೂರ್ತಿಗಳ ಸಾನ್ನಿಧ್ಯದಲ್ಲಿ ಸ್ಫುರಿಸಿದ ಭಕ್ತಿ-ಭಾವನೆಗಳೇ ಈ ಎಲ್ಲ ಕವನಗಳ ವಸ್ತು. ಆಯಾ ದೇವರ, ದೇವತೆಗಳ ದರ್ಶನ ಸಂದರ್ಭದಲ್ಲಿ ಆ ಧರ್ಮಗಳ ಹಿನ್ನೆಲೆ-ಯಲ್ಲಿದ್ದ ಉದಾತ್ತ ವಿಚಾರಗಳನ್ನು ಮೆಲುಕುಹಾಕುತ್ತ, ಅವುಗಳನ್ನು ಗೌರವಭಾವದಿಂದ ನೆನೆಯುವ ಅವರ ಮನೋಭಾವ ಮೆಚ್ಚುವಂತಹದು. ನಾಡಿನ ಹಲವಾರು ದೇವಾಲಯಗಳಲ್ಲಿ ಅರಳಿರುವ ಶಿಲ್ಪಕಲೆಯನ್ನು ಮೆಚ್ಚಿದ ಅವರು, ಸುಂದರವಾದ ಶಬ್ದಗಳಲ್ಲಿ ಆ ಸೌಂದರ್ಯವನ್ನು ಬಿಂಬಿಸಿದ್ದಾರೆ. ಹಳೆಬೀಡಿನ ದೇವಾಲಯದ ಗೋಡೆಯ ಶಿಲೆಯಿಂದ ಹೆಜ್ಜೆಗಳ ತಾಳಕೆ, ಗೆಜ್ಜೆಗಳ ನಾದಗಳೊಂದಿಗೆ, ಸಂಗೀತ-ನಾಟ್ಯಸರಸ್ವತಿ ಕುಣಿಯಲು ಬರುವ ನಾಟ್ಯಸರಸ್ವತಿ ಅವರ ಕವಿತೆಯಲ್ಲಿ ಮತ್ತೆ ಜೀವತುಂಬಿ ಎದ್ದುಬಂದಂತೆ ಭಾಸವಾಗುತ್ತದೆ. ಮುರ್ಡೇಶ್ವರದ ಭೋರ್ಗರೆವ ಸಾಗರದಿ, ಭೂಮಿಯು ಬಾನನು ಸೇರಿದಂತೆ ಭಾಸವಾದರೂ, ಗಂಗೆ ಕ್ಷೀರಸಾಗರ ಸುತ್ತಿ ಶಿವನ ಪಾದವ ನಿತ್ಯ ತೊಳೆಯುತ್ತಿರುವ ದೃಶ್ಯವನ್ನು ಅವರು ಭಕ್ತಿಯಿಂದ ಸ್ಮರಿಸುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹರಿಹರ ನುಂದಿರವನ್ನು ನೋಡಲು ಬಂದರಂತೆ ರವಿ-ಚಂದಿರ. ನಂಜನಗೂಡಿನ ನಂಜುಂಡೇಶ್ವರನ ಗುಡಿಯ ಶಂಖದ ಬಿಂಕದ ನಾದ, ಹೆಜ್ಜೆಗಳ ಗೆಜ್ಜೆಯ ಧ್ವನಿ, ಢಂ, ಢಂ ಡಮರು ನಿನಾದ ಇವುಗಳ ವರ್ಣನೆಯಲ್ಲಿಯ ಶಬ್ದ-ಮಾಧುರ್ಯ ಮೆಚ್ಚುವಂತಹದು. ಬನವಾಸಿಯ ಮಧುಕೇಶ್ವರಲಿಂಗದ ವರ್ಣನೆ ಚೇತೋಹಾರಿಯಾಗಿದೆ 'ಎತ್ತಲೂ ಕತ್ತಲು ಈಶನ ಮುತ್ತಲು, ಲಿಂಗದ ವರ್ಣವ ಮಿಂಚಿತು ಸುತ್ತಲು' ಎಂಬ ವರ್ಣನೆ ಎಷ್ಟು ಸ್ಫುಟವಾಗಿದೆ! ಶೃಂಗೇರಿಯ ತುಂಗೆಯನ್ನುದ್ದೇಶಿಸಿ 'ಮಂಗಳಮುಖಿ ನಿನ್ನಂಗಳದೊಳಗೆ ತಿಂಗಳ ತಿಳಬೆಳದಿಂಗಳ ಸುಧೆಯೊಳು, ಎನ್ನಯ ಕಂಗಳ ಜ್ಯೋತಿಯ ಶಾರದೆ ದರುಶನ ನೀಡಿ ಕಂಗೊಳಿಸು' ಎಂದು ಕವಿ ಅಂಗಲಾಚುತ್ತಾನೆ. ಓದುಗರಿಗೆ ಕನ್ನಡ-ನಾಡಿನ ಅನೇಕ ದೇವಾಲಯಗಳ ದರ್ಶನದೊಂದಿಗೆ, ಅವುಗಳಲ್ಲಿ ಕಂಗೊಳಿಸುವ ಕಲೆಯ ವೈಭವವನ್ನು ಎತ್ತಿತೋರಿಸಿ, ಅವುಗಳ ದರ್ಶನದಿಂದ ಸ್ಫುರಿಸುವ ವಿಚಾರಗಳನ್ನು ಮೆಲುಕುಹಾಕುವಂತೆ ಮಾಡುವ ಈ ಕಾವ್ಯಹಾರ ದೇವಭಕ್ತರ ಮನಸ್ಸನ್ನು ತಣಿಸುವಂತಹದು. ಶ್ರೀ ಕಟ್ಟೆಯವರ ಕಾವ್ಯೋಪಾಸನೆ ಚಿಗುರಿ ಇನ್ನೂ ಒಳ್ಳೆ ಪುಷ್ಪಗಳನ್ನಿಯಲಿಯೆಂದು ಹಾರೈಸುತ್ತೇನೆ.

ಸದಾಮಂಗಲ
೨೬-೩-೬೮೮

ಸದಾಶಿವ ಒಡೆಯರ

Sri Vidyabharathi Book Centre, Sringeri

CC-O. In Public Domain. Digitized by eGangotri

ಹರ ದರ್ಶನ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಇಷ್ಟಾರ್ಥದಿಡಗುಂಜಿ

(ಇಡಗುಂಜಿ ಕ್ಷೇತ್ರ)

ಪಡುವಣ ಘಟ್ಟದ ಪಂಕ್ತಿ ಭಯಾನಕ
ನಡುವಣ ಇಡಗುಂಜಿಯ ಬೆನಕ
ಭಕುತರ ಕಷ್ಟ ಅನಿಷ್ಟ ನಿವಾರಕ
ಇಷ್ಟದಿ ನೀಡುವ ಧನಕನಕ ‖ ಪಲ್ಲ ‖

ಪಂಚ ಕಜ್ಜಾಯ ಮೋದಕ ಪ್ರಿಯನಿವ
ಮೋದದಿ ಕುಣಿಯುವ ಬಾಲಕನು
ಶರಾವತಿ ಎಡೆಯಲಿ ಸಾಗರದುಡಿಯಲಿ
ಮಹಾಮಹಿಮನಿವ ರಾಜಿಸುವ ‖ ೧ ‖

ಗೌರೀಶಂಕರ ಮುದ್ದು ಕುವರನು
ಸಿದ್ಧಿ ವಿನಾಯಕ ನಾಯಕನು
ವಿಘ್ನ ವಿನಾಶಕ ಪುಣ್ಯಪ್ರದಾಯಕ
ಇಷ್ಟಾರ್ಥದ ಇಡಗುಂಜಿ ಇದು ‖ ೨ ‖

ನಾರದ ಸನ್ನುತ ಸುರಗಣ ವಂದಿತ
ಏಕದಂತ ಗಣನಾSಥನೇ
ಅಸುರರ ಕೆರಳಿಸಿ ದ್ವಿಜಕುಲವರಳಿಸಿ
ಸ್ವರ್ಗವ ಇಳೆಯೊಳಗಿಳಿಸಿದನೇ ‖ ೩ ‖

Sri Vidyabharathi Book Centre, Sringeri

CC-O. In Public Domain. Digitized by eGangotri

ಇಡಗುಂಜಿಯ ವಿನಾಯಕ

(ಇಡಗುಂಜಿ ಕ್ಷೇತ್ರ)

ಹುಚ್ಚು ಬಾಳಿನ ಮೋಹವು ಹೆಚ್ಚು
ಬಲು ಅಚ್ಚು ಮೆಚ್ಚು ಮೆಚ್ಚು ॥ ಪಲ್ಲ ॥

ಮನಬಿಚ್ಚು ದೀಪ ಹಚ್ಚು
ಬೆನಕನಿಗೆ ಭಕ್ತಿ ದೀಪಾ ॥ ಅ. ಪ. ॥

ಜನಕಂಜಿ ನಡೆಯಬೇಡ
ಮನಕಂಜಿ ದುಡುಕಬೇಡ
ಕಾರಂಜಿ ಕರುಣಧಾರೆ
ಇಡಗುಂಜಿ ಮರೆಯಬೇಡ ॥ ೧ ॥

ಇದು ಪುಣ್ಯದಾ ಅರಣ್ಯ
ಲಾವಣ್ಯ ಮೂರ್ತಿ ಗಣಪ
ನಾರದರು ತಂದರಂದು
ನೆಲೆಸಿದರು ಸುರರು ಬಂದು ॥ ೨ ॥

ವಂದಿಪರು ನಿನಗೆ ಆದ್ಯ
ಮೊಳಗಿರಲು ಸಪ್ತ ವಾದ್ಯ
ಪ್ರಿಯಮೋದಕಗಳ ಖಾದ್ಯ
ನೈವೇದ್ಯ ಪಂಚಕಜ್ಜಾಯ ॥ ೩ ॥

ಶರಾವತಿಯ ಪರಿಸರಾ
ಪರಿಹಾರ ತಾಪ ಶಾಪ
ಆಸರೆಯ ಸೂಸಿ ಸೂಸಿ
ಕೈಬೀಸಿ ಕರೆಯುತಿಹುದು ॥ ೪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಭೂಕೈಲಾಸವ ನೋಡಿದಿರಾ

(ಗೋಕರ್ಣ ಕ್ಷೇತ್ರ)

ಭೂಕೈಲಾಸವ ನೋಡಿದಿರಾ, ಗೋ–
ಕರ್ಣದ ದರುಶನ ಮಾಡಿದಿರಾ ॥

ಮಾತೆಯ ಮಾತನು ತನುಜ ಮನ್ನಿಸಿ
ಈಶನ ಲಂಕಾಧೀಶ ಮೆಚ್ಚಿಸಿ
ಧರೆಗೆ ತಂದ ಈ ಮಹಾಬಳೇಶ್ವರ
ವೈಭವ ನೋಡಿದಿರಾ ॥ ೧ ॥

ಕಡಲಸಿರಿಯ ಮಡಿಲೊಳಗೆ ನಿಂದಿಹ
ಗೋವಿನ ಕರ್ಣದ ರೂಪ ಹೊಂದಿಹ
ಬೇಡಿದ ವರಗಳ ನೀಡಲು ಬಂದಿಹ
ದೇವನ ನೋಡಿದಿರಾ ॥ ೨ ॥

ಸುರಮುನಿಗಳ ಮೊರೆ ಆಲಿಸಿ ಬೆನಕ
ಲಂಕೆಯ ರಾವಣನಂಕೆಯ ತಪ್ಪಿಸಿ
ಆತ್ಮಲಿಂಗವನೆ ಪಡೆದಾ ದಕ್ಷಿಣ
ಕಾಶಿಯ ನೋಡಿದಿರಾ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಗೌರೀಶ ತಾಂಡವವಾಡಿದನು

(ಗೋಕರ್ಣ)

ಗೌರೀಶ ತಾಂಡವವಾಡಿದನು
ಅಸುರರ ಚೆಂಡಾಡಿದನು ॥ ಪ ॥

ಢಂ ಢಂ ಢಂ ಢಂ ಡಮರು ನಿನಾದದಿ
ಭಂ ಬಂ ಬಂ ಬಂ ಶಂಖದ ನಾದದಿ ॥ ಅ. ಪ ॥

ಗೋಕರ್ಣ ಕ್ಷೇತ್ರದಿ ಬಂದು ನಿಂದು
ಶರಣರನು ಕಾಯಲೆಂದು
ವರಗಂಗಾಧರ ಹರ ಹರ ಶಂಭೋ
ಸಾಂಬಸದಾಶಿವ ತ್ರಿನೇತ್ರ ರೂಪ ॥ ೧ ॥

ರುಂಡ ಮಾಲೆಯ ಕೊರಳಲ್ಲಿ ಧರಿಸಿ
ಕರದಲ್ಲಿ ತ್ರಿಶೂಲವಿರಿಸಿ
ಭೋರ್ಗರೆಯುವ ಗಂಗೆಯ ಮೇಲೇರಿಸಿ
ಉರಗ ಭಯಂಕರ ಕೊರಳಲಿ ಸೇರಿಸಿ ॥ ೨ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಶ್ವನಾಥನ ನ್ಯಾಯಾಲಯ

(ಧರ್ಮಸ್ಥಳ)

ಧರ್ಮಸ್ಥಳವಿದು ಧರ್ಮದೇಗುಲ
ವಿಶ್ವನಾಥನ ನ್ಯಾಯಾಲಯ ॥

ಲಕ್ಷದೀಪೋತ್ಸವ ಬಲು ಚೆಂದ
ಭಕುತರು ನೆರೆವರು ಒಲವಿಂದ
ಶ್ರೀ ಮಂಜುನಾಥನ ದಯೆ ಒಂದಿದ್ದರೆ
ಜೀವನ ನಂದನವನವೆಂದ ॥ ೧ ॥

ಅನಾಥರಕ್ಷಕನಿನ ಸತ್ಯ
ಪವಾಡಗರೆವನು ಪ್ರತಿನಿತ್ಯ
ಶರಣಾಗಿ ಇರುವರ ಕರುಣೆಯ ಸಾಗರ
ಮಾನವ ಧರ್ಮದ ಸಾಕಾರ ॥ ೨ ॥

ದಾನಕ್ಕೆ ಧರ್ಮವೆ ತವರಾಗಿ
ಮರ್ಮವನರಿತವರಿವರಾಗಿ
ಅನ್ನ ಅಭಯ ಇನ್ನು ವಸ್ತ್ರದಾನವು
ವಿದ್ಯಾದಾನದ ನೆರವಾಗಿ ॥ ೩ ॥

ಜಗದಲಿ ಒಂದೇ ನ್ಯಾಯಾಲಯ
ಮಂಜುನಾಥನ ದೇವಾಲಯ
ಧರ್ಮವೇ ಜಯವೆಂಬ ದಿವ್ಯ ಮಂತ್ರದಾ
ವಿಶ್ವನಾಥನ ಕಾರ್ಯಾಲಯ ॥ ೪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಧರ್ಮಧರ್ಮಗಳ ಸಂಗಮ

(ಧರ್ಮಸ್ಥಳ ಕ್ಷೇತ್ರ)

ಧರ್ಮಧರ್ಮಗಳ ಸಂಗಮ, ಧರ್ಮಸ್ಥಳ
ವಿಶ್ವನಾಥ, ಮಂಜುನಾಥ ಚಂದ್ರಶೇಖರಾ ॥ ಪ ॥

ಸರ್ವಧರ್ಮಗಳ ಸಾರ ಅಪಾರ
ಧರ್ಮಕೆ ದಯವೇ ಆಧಾರ
ಮರ್ಮವನರಿತವರೆಲ್ಲರಿಗಿಲ್ಲಿದೆ
ಬದುಕು ಸಾರ್ಥಕ ಎಲ್ಲಿ ಇನ್ನೆಲ್ಲಿದೆ ॥ ೧ ॥

ಪುಣ್ಯವು ಅರಳಿದೆ ಪಾಪ ಉರುಳಿದೆ
ಅನಾಥರಿಗೆ ನಾಥ ಮಂಜುನಾಥನ
ಅನ್ನದಾನವು ಅಮೃತಸಮಾನ
ನ್ಯಾಯಕೇ ಮಾನ ಸಂಮಾನವಿಲ್ಲಿ ॥ ೨ ॥

ನಿತ್ಯ ನೂತನ ದಿವ್ಯ ಚೈತನ್ಯಧಾರೆ
ಸತ್ಯನಾಥನ ಭವ್ಯ ದರುಶನಕೆ ಬಾರೆ
ವರ ಬೇಡಿ ಬಂದವರ ಬಂಧುವಾಗಿ
ಕರನೀಡಿ ನಿಂದ ಕರುಣಾಸಿಂಧುವಾಗಿ ॥ ೩ ॥

Sri Vidyabharathi Book Centre, Singeri

CC-O. In Public Domain. Digitized by eGangotri

ಗೌರೀ ತನಯ ಶೌರಿ

(ಸುಬ್ರಹ್ಮಣ್ಯ ಸ್ವಾಮಿ)

ಗೌರೀ ತನಯ ಶೌರಿ ನಪಿಲನೇರಿ ಬಂದನೇ
ನಾಗರೂಪ ಧರಿಸಿ ನಿಂದ ಪಾಪಹರಣನೇ ॥ ಪ ॥

ಮುಂದಹಾಸನೇ ಆಂದಚೆಂದವದನನೇ
ಷಣ್ಮುಖಾನಂದ ಬಂದ ಸುಖವ ತಂದನೇ ॥ ೧ ॥

ಲೋಕಪಾಲನೇ ಕೋಟಿಸೂರ್ಯ ತೇಜನೇ
ಬೇಡಿದ ವರಗಳನು ಸುರಿವ ಹರನ ಕುವರನೇ ॥ ೨ ॥

ರೋಗ ಹರಣನೇ ರಾಗ ಯೋಗ ಪ್ರೀಯನೇ
ಆರಿಗಳರಿಯನೇ ಸರಿಯ ಸಾಟಿ ಕಾಣೆನೇ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

" ಕನ್ನಡದ ಗುಡಿಯು "

(ಹಳೇಬೀಡು)

ಕನ್ನಡದ ಗುಡಿಯು
ಕಲೆಯ ಕನ್ನಡಿಯು
ಹಳೆಬೀಡು ನಾಡು
ವೈಭವದ ಹಾಡು ‖ ಪ ‖

ಹೊಯ್ಸಳೇಶ ಶಾಂತಳ
ಕೇದಾರ ಈಶರು
ಶಿಲೆಯಿಂದ ಸಂಗೀತ
ನಾಟ್ಯವಾಡುತ ಬರುವ ‖ ೧ ‖

ಶಿಲೆಗಳಲಿ ಶೃಂಗಾರ
ರಸಭಾವ ಭಂಗಿಗಳು
ವಿನ್ಯಾಸ ವೈಖರಿಯು
ಸನ್ಯಾಸ ಬಿಡಿಸುವ ‖ ೨ ‖

ಹೆಜ್ಜೆಗಳ ತಾಳಕೆ
ಗೆಜ್ಜೆಗಳ ನಾದಗಳು
ನೃತ್ಯ ಸರಸ್ವತಿ
ಸ್ತುತ್ಯ ಕಲಾಕೃತಿ ‖ ೩ ‖

ಮಿಡಿಯಿತು ವೀಣೆ
ಶಿವನಾಣೆ ನುಡಿಯಿತು
ಬೇರೆಲ್ಲು ಕಾಣೆ
ಈ ಕಲ್ಲುವೀಣೆ ‖ ೪ ‖

Sri Vidyabharathi Book Centre, Sringeri

CC-O. In Public Domain. Digitized by eGangotri

ಹೊಯ್ಸಳೇಶ್ವರ ಈಶ

(ಹಳೇಬೀಡು)

ಹೊಯ್ಸಳೇಶ್ವರಾ ಈಶ ಶಾಂತಳೇಶ್ವರ
ಹಳೇಬೀಡು ವಾಸ ಶ್ರೀ ಕೇದಾರೇಶ್ವರ ॥ ಪ ॥

ಎಲ್ಲಿ ನೋಡಿದಲ್ಲಿ ಕಲ್ಲಿನಲ್ಲಿ ಸುಸ್ವರ
ಅಂದಚೆಂದದಿಂದ ನಿಂದರಿಲ್ಲಿ ಅಪ್ಸರ ॥ ೧ ॥

ಇಲ್ಲಿ ಗಣಪತಿ ಅಲ್ಲಿ ಕುಣಿವ ಸರಸತಿ
ಪ್ರಕೃತಿ ಪುರುಷರೆಲ್ಲ ತಣಿವರಿಲ್ಲಿ ಸರಸದಿ ॥ ೨ ॥

ಈಶ ತ್ರಯರಲಿ ಶ್ರೀಶ ಅತಿ ವಿನಯದಲಿ
ಚೆನ್ನಕೇಶವನ ರೂಪ ಧರಿಸಿ ಮೆರೆಯುವ ॥ ೩ ॥

ಜೀವಿಗಳಲಿ ಕಾಣದಂಥ ಜೀವಭಾವವು
ಕಲ್ಲಿನಲ್ಲಿ ಕಂಡೆ ಕಲ್ಲಿನಂತೆ ನಿಂದೆನು ॥ ೪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ದರುಶನ ಮಾತ್ರ ಪಾವನ ಸೂತ್ರ

(ಮುರ್ಡೇಶ್ವರ ಕ್ಷೇತ್ರ)

ದರುಶನ ಮಾತ್ರ ಪಾವನ ಸೂತ್ರ
ಮುರ್ಡೇಶ್ವರ ಸನ್ನಿಧಿ ಪರಮ ಪವಿತ್ರ ॥

ರೊಚ್ಚಿನ ಕಿಚ್ಚಲಿ ರಾವಣಾಸುರ
ಧರೆಗೆ ಇಳಿದ ಶಿವನಾತ್ಮಲಿಂಗವಾ
ಸುತ್ತಿ ಸುತ್ತಿ ಕಿತ್ತೆಸೆದ ಅಂಗದಾ
ಪುಣ್ಯ ಕುಸುಮ ಈ ರಮ್ಯ ಮಂದಿರ ॥ ೧ ॥

ಶಂಭೋಶಂಕರನಿಗೆ ಜಯಕೋರುತ
ಸುರಗಣ ಗಣಾಧಿಪತಿಯರು ಸೇರುತ
ಕೈಲಾಸದ ನಿಜ ದರುಶನ ತೋರುತ
ತ್ರಿಭುವನ ಪಾಲನ ಪಾಲಗಡಲಿದು ॥ ೨ ॥

ಸೃಷ್ಟಿಯ ಸೊಬಗಿನ ಸಾಗರವಾಗಿ
ದೃಷ್ಟಿಗೆ ಕನಕವೃಷ್ಟಿಯ ತೋರಿ
ಸಿರಿದೇವಿಯು ನಯನಮನೋಹರವಾಗಿ
ವರವಾಗಿ ಹರನೊಲುಮೆ ಅಮರವಾಗಿ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಕಡಲೊಡಲ ಕೈಲಾಸ

(ಕೋಟೀಶ್ವರ, ಮುರ್ಡೇಶ್ವರ)

ಕೋಟೀಶ್ವರಾ ಕೋಟಿ ಲಿಂಗೇಶ್ವರಾ, ಸಾಟ
ನಿಮಗಿಲ್ಲ ಕಡಲೊಡೆಯ ಮುರ್ಡೇಶ್ವರಾ ॥ ಪ ॥

ಭೋರ್ಗರೆವ ಸಾಗರದಿ ಭುವಿಯು ಬಾನನು ಸೇರಿ
ಕಡಲ ಒಡಲಲಿ ಶ್ವೇತ ಶಿಲೆಗಳನು ಸಾರಿ
ಬೆಳದಿಂಗಳ ರಜತ ಕಿರಣಗಳ ತೂರಿ
ಭಕುತರಿಗೆ ಕೈಲಾಸ ದರುಶನವ ತೋರಿದ ॥ ೧ ॥

ಎತ್ತ ನೋಡಿದರತ್ತ ಕ್ಷೀರಸಾಗರ ಸುತ್ತಿ
ಶಿವನ ಪಾದವ ನಿತ್ಯ ತೊಳೆಯುತ್ತ ಸುತ್ತ
ಅಷ್ಟದಿಕ್ಪಾಲಕರಿಷ್ಟದೇವಗಣ ಸೇರುತ್ತ
ಶಂಭೋ ಶಂಕರನ ದರುಶನವನಿತ್ತ ॥ ೨ ॥

ಶಿವನಾತ್ಮ ಲಿಂಗದಾ ಅಂಶವಿದು ಸತ್ಯಾಂಶ
ಆತ್ಮಲಿಂಗದ ಭಂಗ ಅಂಗ ಲಿಂಗಗಳಾಗಿ
ಗಿರಿಧಾಮಗಳ ಸಿರಿಯ ಎಲ್ಲೆಯನು ಮೀರಿ
ಸಾಗರವ ಸೇರಿದಾ ಕರುಣಾಸಾಗರ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ತುಂಗಭದ್ರೆಯ ಸಂವಹನ

(ಹರಿಹರ ಕ್ಷೇತ್ರ)

ತುಂಗಭದ್ರೆಯ ಸಂವಹನ
ಹರಿಹರ ಕ್ಷೇತ್ರವೆ ಪಾವನ ॥
ಶಂಕರ ನಾರಾಯಣ ಮಂತ್ರ
ಒಂದಾಗಿರಿಸುವ ತಂತ್ರ
ಕೈಲಾಸವೇ ವೈಕುಂಠಾ
ವೈಕುಂಠವೆ ಕೈಲಾಸ
ಹರಿಹರರೊಂದೆಡೆ ಸೇರಿ
ಉದ್ಧಾರಕೆ ತೋರಿಹ ದಾರಿ ॥ ೧ ॥

ಶಿಷ್ಟರಿಗೆ ಪರಮ ರಕ್ಷೆ
ದುಷ್ಟರಿಗೆ ಅಧಮ ಶಿಕ್ಷೆ
ಶಿವ ವಿಷ್ಣು ಸಮಾಗಮವೇ
ಅರಿಷಡ್ವರ್ಗಕೆ ಅರಿಯು
ಹರಿಹರೇಶ್ವರನ ರೂಪ
ಪರಿಹರಿಸಿತು ಸಂತಾಪ ॥ ೨ ॥

ವರಲಕ್ಷ್ಮಿ ಶ್ರೀ ಗೌರೀ
ಸಂಪದ ಶುಭ ಸಂದೇಶ
ಶ್ರೀ ಚಕ್ರ ತ್ರಿಶೂಲಗಳಾ
ಸಂಗಮದಾ ಸಂಕೇತ
ಗಂಗೆಯ ಶಿರದಲಿ ಧರಿಸಿ
ತುಂಗೆಯ ಪಾದದಿ ಇರಿಸಿ ॥ ೩ ॥

Sri Vidyabharathi Book Centre, Shingeri

CC-O. In Public Domain. Digitized by eGangotri

ಹರಿಹರ ಮಂದಿರ ಸುಂದರ

(ಹರಿಹರ ಕ್ಷೇತ್ರ)

ಹರಿಹರ ಮಂದಿರ ಸುಂದರ,
ನೋಡಲು ಬಂದರು ರವಿ ಚಂದಿರ ॥ ಪ ॥

ಘನ, ತ್ರಿಶೂಲಧಾರೀ ಸಂಕಟಹಾರೀ
ಚಕ್ರಪಾಣಿ ರಕ್ಕಸ ಸಂಹಾರೀ
ರುಂಡಮಾಲೆ ಕೊರಳಲಿ ವೈಜಯಂತೀ
ಪುಣ್ಯದ ಪರಿಸರ ಹರಿಹರೇಶ್ವರ ॥ ೧ ॥

ಸಿರಿ, ತುಂಗಭದ್ರೆಯರು ಸಂಧಿಸಿ ಸಾಗಲು
ದೈತಾದ್ವೈತರು ನಂದಿಸಿ ಮೊರೆ ಇಡಲಂದದಿ
ಶಿವನಲಿ ಶ್ರೀಹರಿ ಸಮರಸವಾಗಲು
ಆಸುರರು ಉರಿದರು ಮೆರೆದರು ಸುರರು ॥ ೨ ॥

ವರ, ಗೌರಿಗಣೇಶರು ಈಶಗೆ ಬಲದಲಿ
ಭಾಗ್ಯದ ಲಕ್ಷ್ಮೀ ಶ್ರೀಶಗೆ ಎಡದಲಿ
ಗಂಗೆಯು ಜಡೆಯಲಿ ತುಂಗೆಯು ಎಡೆಯಲಿ
ಶಿಲೆಯಲಿ ಕಲೆಯದು ಅರಳಿದೆ ಗುಡಿಯಲಿ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ವಿರುಪಾಕ್ಷೇಶ್ವರ

(ಹಂಪೆ ಕ್ಷೇತ್ರ)

ಜಯ ಜಯ ಜಯಹೇ ಜಯತು
ಜಯ ಕರ್ನಾಟಕ ಮಾತೇ ॥ ಪ ॥

ಸಾರಿತು ವಿಜಯೋತ್ಸವ
ವಿಜಯನಗರ ವೈಭವ ॥ ಅ. ಪ ॥

ಅಡಿಗಡಿಗೇ ಶಿಲೆಯ ಅಡಿಗೇ ಅಡಗಿಹುದು
ಕನ್ನಡ ಸಾಹಿತ್ಯ ಸಂಸ್ಕೃತಿಯ ಸಂಪದವು
ಈಶನ ಸನ್ನಿಧಿ ಇದು ಭುವನೇಶ್ವರಿ ಮಂದಿರವು ॥ ೧ ॥

ಗಜಚರ್ಮಾಂಬರನ ಆಂಬರ ಚುಂಬಿತ ಶಿಖರ
ಶಶಿಧರ ಪಂಪಾಪುರ ಪಶುಪತಿಯ ಮಂದಿರದ
ತ್ರಿನೇತ್ರಿ ವಿರುಪಾಕ್ಷನ ಮುಗಿಲೆತ್ತರ ಗೋಪುರವು ॥ ೨ ॥

Sri Vidyabharathi Book Centre, Singapore

CC-O. In Public Domain. Digitized by eGangotri

ಕನ್ನಡದೇವಿಯ ಗುಡಿ

(ಹಂಪೆ ಕ್ಷೇತ್ರ)

ನೋಡಬನ್ನಿ ಕನ್ನಡ ದೇವಿಯ ಗುಡಿಯ
ಕಲೆಗಳ ಸುಂದರ ಕೈಪಿಡಿಯ ||

ವಿರುಪಾಕ್ಷೇಶ್ವರ ವಿಜಯನಗರ ಸಿರಿ
ಗತಕಾಲದ ಗಂಧರ್ವಗಿರಿ
ಪಂಪಾಪುರ ಪಶುಪತಿಯಾ ಮೂರುತಿ
ವಿದ್ಯಾರಣ್ಯರ ಕೀರುತಿಯು ||೧||

ಕನ್ನಡ ಕಲಿಗಳ ಕಲೆಗಳ ಶಿಲೆಗಳ
ನಾಡಿದು ದಾಸರ ನೆಲೆವೀಡು
ಕನ್ನಡ ಕಂಪು ಸೊಂಪು ಇಂಪುಗಳ
ವಿಶ್ವಕೆ ಸೂಸುತ ಆಲೆಯಾಗಿ ||೨||

ಕನ್ನಡ ದೇವೀ ಜಯ ಭುವನೇಶ್ವರಿ
ಪಂಪಾಂಬಿಕೆಯರ ಆಲಯವು
ರಾಮಾಯಣದಾ ಕಿಷ್ಕಿಂಧೆಯು ಋಷಿ-
ಮುನಿಗಳ ಪುಣ್ಯ ತಪೋವನವು ||೩||

Sri Vidyabharathi Book Centre, Sringeri

CC-O. In Public Domain. Digitized by eGangotri

ನಂಜುಂಡನಾಮ ಸ್ಮರಣೆ

(ನಂಜನಗೂಡು ಕ್ಷೇತ್ರ)

ನಂಜನಗೂಡಿನ ಶ್ರೀಕಂಠನ ದಿವ್ಯ ದರುಶನಾ
ನಂಜುಂಡ ನಾಮಸ್ಮರಣೆ ಭವ ರೋಗನಾಶನಾ ||

ಕಪಿಲೆಗೇ ಪ್ರಥಮ .ಪೂಜೆಯನು ಸಲ್ಲಿಸೋಣವೇ
ಅಲ್ಲಿಂದ ಶಿವನ ಸನ್ನಿಧಾನ ಸಂಧಿಸೋಣವೇ
ಪರಿಮಳದ ಪುಷ್ಪ ಬಿಲ್ವಪತ್ರಿ ಹಣ್ಣು ಕಾಯ್ಗಳಾ
ನಂಜುಂಡನಂಘ್ರಿಗರ್ಪಿಸಿ ಮನ ಬಂಧಿಸೋಣವೇ || ೧ ||

ಬಂದಿಹರು ಭಕ್ತರೆಲ್ಲರು ಬಹು ಮುನ್ನ ಜಾತ್ರೆಗೇ
ತಂದಿಹರು ಶಕ್ತರೆಲ್ಲರು ಸಿರಿಹೊನ್ನ ಕಾಣಿಕೇ
ನೊಂದಿಹರು ನನ್ನಂತೆ ಪರರು ದಾರಿಕಾಣದೇ
ಹೊಂದಿಹರು ಸದ್‌ಭಕ್ತಿ ರೂಪ ಸತ್ಯಶಕ್ತಿಯಾ || ೨ ||

ಝಗಝಗಿಸುವಂಥ ಉತ್ಸಾಹದ ದೀಪೋತ್ಸವಾ
ಆಗಸದ ತಾರೆ ಎಲ್ಲವು ಧರೆಗಿಳಿದು ಬಂದವೇ
ಸಂಗೀತದುತ್ಸವಾ ಶಿವನಾ ಮಂಗಳೋತ್ಸವಾ
ಜನಮನವ ಬೆಳಗುವಂಥ ಇದೇ ಕಾರ್ತಿಕೋತ್ಸವಾ || ೩ ||

Sri Vidyabharathi Book Centre, Sringeri

CC-O. In Public Domain. Digitized by eGangotri

ಹೊಡೀ ನಗಾರಿ ಮ್ಯಾಲ ಕೈಯ

(ನಂಜನಗೂಡು ಕ್ಷೇತ್ರ)

ಹೊಡೀ ನಗಾರಿ ಮ್ಯಾಲ ಕೈಯಾ
ಕುಣಿ, ಕುಣೀ ಕುಣೀ ಥಕ ಥಯ್ಯಾ ॥ ಪ ॥

ಬಾರಿಸಿ ಕನ್ನಡ ಡಿಂಡಿಮವ
ಮೇಲೇರಿಸಿ ನಂಜುಂಡನ ಧ್ವಜವ ॥ ಅ. ಪ. ॥

ಶಂಖದ ಬಿಂಕದ ನಾದ
ಹೆಜ್ಜೆಗಳಾ ಗೆಜ್ಜೆ ನಿನಾದ
ಭಕ್ತಿಯ ಮದವೇ ಮೋದ
ಥಂ ಥಂ ಥಂ ಡಮರು ನಿನಾದ ॥ ೧ ॥

ನಂಜುಂಡೇಶನ ತಾಣ
ಶಿವಭಕ್ತರ ಪಂಚಪ್ರಾಣ
ಭಕ್ತಿಲಿ ಮಾಡು ಪ್ರಯಾಣ
ಬಲು ಸುಗಮ ನಿನ್ನ ಪ್ರಯಾಣ ॥ ೨ ॥

ಪಂಚತೇರುಗಳನೇರಿ
ಪಂಚವೇದಗಳನು ಸಾರಿ
ಐವರು ದೇವರು ಸೇರಿ
ಐತರುವರು ಶುಭವನು ಕೋರಿ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಮಧುಕೇಶ್ವರ

(ಬನವಾಸಿ)

ಬನ ಬನ ಮಧುಬನವಾಸಿ
ಮಧುಕೇಶ್ವರ ವರ ದಕ್ಷಿಣ ಕಾಶಿ ॥ ಪ ॥

ಆದಿಕವಿ ಪಂಪನ ಸಿರಿನಾಡು
ಮಧುಕೇಶನ ಬನವಾಸಿಯ ನೋಡು
ಸೋದೆ ಅರಸ ಚಾಲುಕ್ಯ ಕದಂಬರು
ಯಾದವ ಪಲ್ಲವರಾ ನೆಲೆವೀಡು ॥ ೧ ॥

ಎತ್ತಲೂ ಕತ್ತಲು ಈಶನ ಮುತ್ತಲು
ಲಿಂಗದ ವರ್ಣವು ಮಿಂಚಿತು ಸುತ್ತಲು
ದರುಶನ ನೀಡುತ ಭಕುತರ ಕರೆಯುತ
ಮಧುಕೇಶ್ವರ ನಾಮದಿ ನೀ ಮೆರೆದೆ ॥ ೨ ॥

ಗಿರಿಜೆಯು ಬದಿಯಲಿ ನಂದಿಯು ಎದುರಲಿ
ದೀಪದ ಸ್ತಂಭವು ಮುಟ್ಟಿದೆ ಮುಗಿಲು
ಕಲ್ಲಿನ ಮಂಟಪದಲ್ಲಿಯ ಕೆತ್ತನೆ
ಶಿಲ್ಪಕಲೆಯು ಕಲ್ಪನೆಗೂ ಮಿಗಿಲು ॥ ೩ ॥

Sri Vidyabharathi Book Centre, Shringeri

CC-O. In Public Domain. Digitized by eGangotri

ಏಳುಕೋಟೆ ಮೈಲಾರಲಿಂಗ

(ಮೈಲಾರ ಕ್ಷೇತ್ರ)

ಏಳು ಕೋಟಿ ಮೈಲಾರಲಿಂಗಯ್ಯ
ಎದ್ದೇಳು ಸ್ವಾಮೀ ॥ ಪ ॥

ಏಳು ಏಳು ಮೊರೆಯ ಕೇಳು
ಏಳು ಕೋಟಿ ಏಳು ಕೋಟಿ ॥ ಅ. ಪ ॥

ತುಂಗಭದ್ರೆ ಮುಂಗಳ ಕೋರಿ
ಗಂಗಮ್ಮಾಳವ್ವನು ಸೇರಿ
ಗುಡದಯ್ಯನ ಕಾರಣಿಕದಲಿ
ಕೈಲಾಸವ ಮೆರೆಸುತಲಿಹರು ॥ ೨ ॥

ಮಾರ್ತಾಂಡ ಭೈರವ ಹರನೇ
ಶತಶೃಂಗ ಮೈಲಾರ ಲಿಂಗ
ಸಕಲ ಜಗದ ಆಧಾರಾ
ಸಕಲ ವೇದ ವೇದದ ಸಾರಾ ॥ ೩ ॥

ಮಹಾದೇವ ಮೈಲಾರೀ
ಮಾರ್ತಾಂಡನೇ ಧವಳಾಂಗ
ಡೋಣಿ ತ್ರಿಶೂಲವ ಪಿಡಿದು
ಡಮರು ಬಾರಿಸುತ್ತ ಬರುವ ॥ ೪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಸೋಮೇಶ್ವರಾ

(ಕುರುಡು ಮಲೆ)

ಕುರುಡು ಮಲೆ ಸೋಮೇಶ ಪೂರ್ವಮುಖಿ
ಇವನೆಡೆ ಇರಲು ಅಪೂರ್ವ ಸುಖ ‖ ಪ ‖

ಜಕ್ಕಣನಿಕ್ಕಿದ ಶಿಲ್ಪಕಲೆ
ಕಪ್ಪು ಶಿಲೆಯೊಳು ಒಪ್ಪುತಲಿ
ಸುಂದರ ಗುಡಿಯ ಗೋಡೆ ಕಂಬಗಳು
ಶಂಭು ಪುರಾಣವ ಬಿಂಬಿಪವು ‖ ೧ ‖

ತ್ರಿಪುರಾಸುರ ಸಂಹಾರ ಬಗೆ
ಮಹಾಗಣಪನಲಿ ಮೊರೆ ಇಡಲು
ಸುರಗಣರೊಂದೆಡೆ ಒಂದುಗೂಡಿದ
ಮಲೆಗಳ ನಾಡು ಕುರುಡು ಮಲೆ ‖ ೨ ‖

ಮುನಿಕೌಂಡಿಣ್ಯ ಗಣೇಶಗಿರಿ
ಕಂಟಾಚಲ ಬೆಟ್ಟದ ನಗರಿ
ಆಗರ್ಭವೈಖರಿ ನವರಂಗದ ಸಿರಿ
ಗರ್ಭಗುಡಿಯ ಆ ಗರ್ಭದಲಿ ‖ ೩ ‖

Sri Vidyabharathi Book Centre, Sringeri

CC-O. In Public Domain. Digitized by eGangotri

ದಶಲಿಂಗ ಓಲಗ

(ಪಟ್ಟದ ಕಲ್ಲು)

ನಿಲ್ಲು ನಿಲ್ಲು ಪಟ್ಟದ ಕಲ್ಲು
ಶಿವನಾಲಯವೀ ನಿಲಯ ॥ ಪ ॥

ಸುತ್ತು ಸುತ್ತು ಧ್ಯಾನವ ಇತ್ತು
ಶಿವರೂಪಗಳಿವು ಹತ್ತು ॥ ಅ. ಪ ॥

ಗಳಗನಾಥ ಜಂಬುಲಿಂಗ ಸಂಗವೇಶ
ಪಾಪನಾಥ ನಾಗರಾಜ ಸಿದ್ಧೇಶಾ
ವಿರುಪಾಕ್ಷೇಶ್ವರ ಮಲ್ಲಿಕಾರ್ಜುನಾ
ಚಂದ್ರಶೇಖರ ಕಾಶಿಯ ನಾಥಾ ॥ ೧ ॥

ವಿಗ್ರಹಗಳ ಗೃಹ ಅಗ್ರಹಾರಾ
ದಶಲಿಂಗ ಓಲಗಕೆ ಕರೆಯೋಲೆ
ಶಿವಪಾರ್ವತಿಯರ ಮೋಹಕ ರೂಪಾ
ಮೂಜಗದಲಿ ಬಲು ಅಪರೂಪಾ ॥ ೨ ॥

ಅಂಧಕ ತ್ರಿಪುರಾಸುರ ಸಂಹಾರಾ
ಶಿಲೆಯಲಿ ಇತಿಹಾಸದ ಸಾರಾ
ಗಿರಿಜಾವಲ್ಲಭ ಗಜಚರ್ಮಾಂಬರ
ಗಜಾಸುರನ ಅರಿ ಗೌರಿವರ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಕೂಡಲಸಂಗಮ ದೇವನ ಸ್ಮರಣೆ

(ಕೂಡಲ ಸಂಗಮ)

ಕೂಡಲ ಸಂಗಮ ದೇವನಾ ಸ್ಮರಣೆ
ಧರಣಿಯೊಳು ಶರಣಗೆ ಘನ ಕರುಣೆ ॥ ಪ ॥

ಅಣ್ಣ ಬಸವಣ್ಣನಾ
ಮನದ ನಂದನವನ
ಕಲ್ಯಾಣದ ಕ್ರಾಂತಿಯಲಿ
ಶಾಂತಿ ತಂದವನಾ ॥ ೧ ॥

ಶರಣರಿಗೆ ಆಸರೆ
ನಿನ್ನ ನಾಮಾಂಕಿತ
ನಿನ್ನ ಸನ್ನಿಧಿ ಬಯಸುತ
ಪಾಡುತಾ ನಿರುತ ॥ ೨ ॥

ಕೃಷ್ಣೆ ಮಲಪ್ರಭೆಯರ
ಸುಗಮ ಸಂಗಮದಲಿ
ಕಾವ್ಯಧಾರೆಯು ಚಿಮ್ಮಿತು
ವಚನ ಸಿರಿ ಹೊಮ್ಮಿ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಹರಿ ದರ್ಶನ

Sri Vidyabharathi Book Centre, Sringeri

CC-O. In Public Domain. Digitized by eGangotri

ದಾಸ ಹೃದಯದಿ ವಾಸ

(ಉಡುಪಿ)

ದಾಸಹೃದಯದಿ ವಾಸ ಶ್ರೀಶ
ಕಡಗೋಲ ಪಿಡಿದ ಉಡುಪಿಯ ಕೃಷ್ಣ ॥ ಪ ।

ಮಾವ ಕಂಸನ ಕೊಂದವನೆ
ದೇವಕಿ ಉದರದಿ ಬಂದವನೆ
ಕನಕದಾಸರ ಕೂಗಿಗೆ ಒಲಿದು
ನಲಿದು ಕಿಂಡಿಯಲಿ ನಿಂದವನೆ ॥ ೧ ।

ನಿನ್ನ ಮಂದಿರದಲ್ಲಿ ಪುರಂದರ
ದಾಸರಂದು ಸೇವೆಗೆ ಬಂದು
ನಿನ್ನಯ ದರುಶನ ಭಾಗ್ಯದಿ ಮಿಂದು
ಭಕ್ತಿಯ ಹೊಳೆಯನೆ ಹರಿಸಿದರು ॥ ೨ ।

ನಿನ್ನ ಸುಂದರ ವದನವ ಕಂಡು
ಗುರುರಾಯರು ಪುಳಕಿತಗೊಂಡು
ದರುಶನ ಮಾತ್ರದಿ ಕಾಮಧೇನು ನಿಜ
ಕಲ್ಪವೃಕ್ಷ ತೇಜವ ಪಡೆದ ॥ ೩ ।

ಕೊಳಲನೂದುತಲಿ ಕಡಲದಡದಲಿ
ಮಳಲ ಮಧ್ಯ ವೈಕುಂಠವ ಸೃಜಿಸಿ
ಮಧ್ವರಾಯರಧಿದೇವತೆಯಾಗಿಹ
ನಂದನ ಕಂದ ಮುಕುಂದ ಹರೇ ॥ ೪ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಲಾಲಿ ಲಾಲಿ ಜೋಜೋ ಲಾಲಿ

(ಉಡುಪಿ ಕ್ಷೇತ್ರ)

ಲಾಲೀ ಲಾಲೀ ಜೋಜೋ ಲಾಲಿ ॥ ಪ ॥

ನಂದನಾ ಕಂದ ಮುಕುಂದಗೆ
ಇಂದಿರಾ ರಮಣ ಗೋವಿಂದಗೆ
ನವನೀತ ಚೋರ ಕಿಶೋರಗೆ
ಉದ್ದಂಡ ಉಡುಪಿಶ ಕೃಷ್ಣಗೆ ॥ ೧ ॥

ಗುರುಮಧ್ವಸ್ಥಾಪಿತ ಮೂರುತಿ
ಮುಗಿಲೆತ್ತರಕೆ ತನ ಕೀರುತಿ
ಬೆಳಗುವರು ಮಂಗಳದಾರುತಿ
ಗೋಪಿಯರು ಇಂದೀವರಾಕ್ಷಗೆ ॥ ೨ ॥

ಕೊರಳೊಳಗೆ ತುಳಸಿ ಮಾಲೆಯು
ಬೆರಳೊಳಗೆ ಬಳಸಿದ ಮುರಳಿಯು
ಕಸ್ತೂರಿ ತಿಲಕದಿ ರಾಜಿಪ
ಕೊಳಲನ್ನು ಊದುವ ಕೃಷ್ಣಗೆ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಶಿಲೆಗಳು ಕಲೆಗಳ ನೆಲೆಯಾಗಿ

(ಬೇಲೂರು)

ಶಿಲೆಗಳು ಕಲೆಗಳ ನೆಲೆಯಾಗಿರುವ
ಕವಿ ಕಲ್ಪನೆಗಳ ಸೆಲೆಯಾಗಿರುವ
ಚೆಲುವ ಚೆನ್ನಿಗನ ಅಡಿಗೆ
ನಮಿಸಿರಿ ಕನ್ನಡ ಗುಡಿಗೆ ॥ ಪ

ಯಾತ್ರಿಕನೇ ನಿಲ್ಲು
ಆಲಿಸು ಈ ಸೊಲ್ಲು
ಶಿಲೆಗಳ ಬಲೆಯಲಿ
ಉಲಿಯುವ ಸ್ವರಗಳ
ಆಲಿಗಳ ಪಂಚಮ ನಾದ
ಪಾಮರ ಪಾವನನಾದ ॥ ೧

ಹೆಜ್ಜೆಯ ತಾಳದಲಿ
ಗೆಜ್ಜೆಯ ನಾದಗಳು
ಕುಣಿಸಿತು ತಣಿಸುತ
ಶಿಲ್ಪ ಕನ್ನಿಕೆಯರ
ಕಲ್ಪನೆ ಮನಸಿಗೆ ಮೋಡಿ
ಹಾವಭಾವ ಒಡಗೂಡಿ ॥ ೨

Sri Vidyabharathi Book Centre, Sringeri

In Public Domain. Digitized by eGangotri

ವರವೇಲಾಪ್ರಭಾವ
ಸುರನರರಿಗೆ ವರದ
ಚೆನ್ನಿಗರಾಯನ
ಚಿನ್ನದ ಕಾಯನ
ನಯನಮನೋಹರ ರೂಪ
ಜಗದಲಿ ಬಲು ಅಪರೂಪ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಚೆನ್ನಕೇಶವ ಮಂದಿರ

(ಬೇಲೂರು ಕ್ಷೇತ್ರ)

ಚೆನ್ನಕೇಶವ ಮಂದಿರ
ವರವೇಲಾಪುರ ಸುಂದರ
ವಿಷ್ಣುವರ್ಧನ ಹೊಯ್ಸಳ
ನಿರ್ಮಿಸಿಹ ಪುಣ್ಯಸ್ಥಳ ॥ ಪ ॥

ಕಲೆಗಳಿಗೆ ಇದು ಆಗರ
ಶಿಲೆಗಳಿವು ಅಜರಾಮರ
ಶಿಲ್ಪಕಲೆಯ ಸಾಗರ
ನಿತ್ಯ ನಯನಮನೋಹರ ॥ ೧ ॥

ಕಂಡೆ ಚೆನ್ನಿಗರಾಯನ
ಮೋಹನ ಮಧುಸೂದನ
ಮಕರಕುಂಡಲ ಧಾರನ
ರಸಿಕರಿಗೆ ರಸದಾತಣ ॥ ೨ ॥

ಮೋಹಿನಿಯ ನಿಜರೂಪಿಯೆ
ಲಾವಣ್ಯಮಯ ಮೂರ್ತಿಯೆ
ಕವಿಗಳಿಗೆ ನವಸ್ಫೂರ್ತಿಯೆ
ಎನಿತು ಪೇಳಲಿ ಕೀರ್ತಿಯ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಗಿನೆಲೆ ಆದಿಕೇಶವ

(ಕಾಗಿನೆಲೆ ಕ್ಷೇತ್ರ)

ಕನಕದಾಸರಿಗಾಗಿ ಕನ್ನಡದ ಕುಲಕಾಗಿ
ನೆಲೆಯಾದ ಕಾಗಿನೆಲೆ ಆದಿಕೇಶವರಾಯ ॥ ಪ ॥

ಕಡಲಿನಂತಹ ಒಡಲ ಕೆರೆಯನ್ನು ಬಳಸಿ
ತೆಂಗುಕಂಗುಗಳೊಡನೆ ಕಂಗೊಳಿಪ ದೇವ ॥ ೧ ॥

ಭಕ್ತಿ ಭಾವಗಳೆಂಬ ಶಕ್ತಿಬೀಜವ ಬಿತ್ತಿ
ರಾಗ ವೈರಾಗ್ಯಗಳ ಭಾಗ್ಯವನೆ ಇತ್ತೆ ॥ ೨ ॥

ಜ್ಞಾನಕನಕದಿ ಕೆತ್ತಿ ಕನಕನೆಂಬುವ ರತ್ನ
ಕನ್ನಡಮ್ಮನ ಕೊರಳಪದಕದೊಳಗಿತ್ತೆ ॥ ೩ ॥

ಜಾತಿಹೀನರ ಮನೆಯ ಜ್ಯೋತಿಯಾಗಿಹ ತಂದೆ
ನಿತ್ಯ ನಿರ್ಮಲ ಭಕ್ತಿಯೊಂದೆ ಸಾಕೆಂದೆ ॥ ೪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಬಂದೆ ನಿನ್ನ ದರುಶನಕೆ

(ಕಾಗಿನೆಲೆ)

ಬಂದೆ ನಿನ್ನ ದರುಶನಕೆಂದೆ
ತಂದೆ ಆದಿಕೇಶವ
ಕಾಗಿನೆಲೆ ವಾಸ ಕನಕ-
ದಾಸರಲ್ಲಿ ವಾಸ ॥ ಪ ॥

ದೀನ ಹೀನ ಮಾನವರಿಗೆ
ಸ್ಥಾನ ಮಾನ ನೀಡಿದೆ
ಧ್ಯಾನ ಮೌನ ದಾನವರಿಯೆ
ಮೋಹನ ಮುರಾರಿ ಹರಿಯೆ ॥ ೧ ॥

ಸ್ವರ್ಣಭೂಮಿ ಇಲ್ಲಿ ವರ್ಣ–
ಭೇದರಹಿತ ಪರ್ಣಕುಟಿ
ಹೊಮ್ಮುತಿರಲು ಕರ್ಣಮಧುರ
ಕನಕದಾಸ ಕಾವ್ಯಧಾರೆ ॥ ೨ ॥

ಎಲ್ಲಿ ಹೋದವೆಲ್ಲ ತತ್ವ
ನ್ಯಾಯ ನೀತಿ ಎಲ್ಲಿದೆ
ಉಚ್ಚ ನೀಚ ತಾರತಮ್ಯ
ಮತ್ತೆ ಏಕೆ ಕೇಶವ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಬಂದೆಯಾ ನರಸಿಂಹ

(ತೊರವೆ, ಕನಕಪುರ, ಕೂಡಲೀಪುರ)

ಬಂದೆಯಾ ನರಸಿಂಹ, ಕಂಬದೊಳೆದ್ದು
ಎಳೆಯನ ಭಕುತಿಗೆ ಕಳೆಯನು ತುಂಬುತ ॥ ಪ ॥

ಕಂದ ಪ್ರಹ್ಲಾದಗೆ ಅಂದದಿ ಒಲಿಯುತ
ದುರುಳ ಹಿರಣ್ಯನ ಕರುಳನು ಬಗೆಯುತ ॥ ೧ ॥

ಹರಿನಾಮಾಮೃತ ಮಹಿಮೆಯ ತೋರುತ
ಅರಿಯದ ಅಸುರರ ಸಿಟ್ಟಲೆ ಸೀಳುತ ॥ ೨ ॥

ತೊರವೆ ಕೂಡಲಿ ಕನಕಪುರಗಳಲಿ
ಸೇವೆಯ ಕೊಳ್ಳುತ ಭಕುತರ ಹರಸುತ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಜಯ ನಗರದ ನಾರಸಿಂಹ

(ಪಂಪ, ಕನಕಪುರ)

ಅಗ್ರ ಪೂಜೆಯು ವಜ್ರಕವಚಗೆ
ಉಗ್ರ ಶ್ರೀ ನರಸಿಂಹಗೆ ॥ ಪ ॥

ಕಂದ ಪ್ರಹ್ಲಾದನ ಕರೆಗೆ ಬಂ-
ದೊದಗಿ ನಿಂದೆ ನರಹರಿ
ಹರಿಯ ನಿಂದಿಪ ಅರಿಯ ಕ್ರೋಧದಿ
ಹರಿದು ಕೊಂದ ಕೇಸರಿ ॥ ೧ ॥

ಭಗ್ನವಾಯಿತು ನಿನ್ನ ಮೂರುತಿ
ನಗ್ನವಾಯಿತು ಕೀರುತಿ
ವಿಜಯ ವಿದ್ಯಾರಣ್ಯ ಜಯಿಸಿದ
ಪುಣ್ಯ ಕ್ಷೇತ್ರವರಣ್ಯವ ॥ ೨ ॥

ಹರಿಯ ಭಕ್ತರ ಹಿರಿಯ ದೇವತೆ
ಅಸುರರಾ ಅರಿ ನರಹರಿ
ಕನಕಪುರಿಯಲಿ ಕೂಡಲೀಪುರ
ಹೊರವೆ ಕ್ಷೇತ್ರದಿ ನೆಲೆಸಿದ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ವೀರ ಶ್ರೀ ನಾರಾಯಣ

(ಗದಗು)

ವೀರ ಶ್ರೀ ನಾರಾಯಣಾ
ಕಾವ್ಯ ಸಂಪತ್ತಿಗೆ ನೀ ಕಾರಣಾ ॥ ಪ ॥

ಕವಿ ಕುಮಾರವ್ಯಾಸನ ಅಧಿದೇವ
ದಾಸಾಗ್ರೇಸರರನು ಇವ ಕಾವ
ಏರಿಗನ್ನಡದ ಕವಿಕುಲತಿಲಕ
ಹೇ ಕರುಣಾಕರಾ ದಯಾಸಾಗರಾ ॥ ೧ ॥

ಅನುದಿನವೂ ಗದುಗಿನ ಸದನದಲಿ
ಮಡಿಹುಡಿಯಲಿ ಆರಾಧಿಸಿ ನಿರುತ
ಕವಿಪುಂಗವನು ಬರೆದಾ ಬರಹ
ಹಿರಿ ವರವಾಗಿಹ ಮಹಾಭಾರತ ॥ ೨ ॥

ಬಲು ರಮ್ಯವು ನಿನ್ನ ಪ್ರಭಾವಳಿಯು
ಮುಖಕಮಲದ ಸುಂದರ ದರುಶನವು
ಶಂಖಚಕ್ರಗಳ ನಾಮ ಗಂಧಗಳ
ಚಂದದಿಂದೊಪ್ಪುವ ತೇಜೋಮೂರುತಿ ॥ ೩ ॥

ಹಿ —ಹರಿ–ಹರ–ದೇವೀ ದರ್ಶನ

Sri Vidyabharathi Book Centre, Sringeri

CC-O. In Public Domain. Digitized by eGangotri

ಭಕ್ತಿ ಭಾವನಾ

(ಗದಗು)

ಭಕ್ತಿ ಭಾವನಾ ಕಾವ್ಯ ಸ್ಫೂರ್ತಿಸಾಧನಾ
ಭವ್ಯ ಮೂರ್ತಿ ದಿವ್ಯ ಕೀರ್ತಿ
ವೀರನಾರಾಯಣ ॥ ಪ ॥

ಕವಿ ಕುಮಾರವ್ಯಾಸ ನಿನ್ನ
ಸೇವೆಗೈದು ಕನ್ನಡದ
ಕಾವ್ಯಸಿರಿಯ ಸೊಬಗು ಸುರಿಸಿ
ಬರೆದ ಮಹಾಭಾರತ ॥ ೧ ॥

ನಿನ್ನ ದಯವಾಯಿತೆಮ್ಮ
ನಾಡು ಉದಯವಾಯಿತು
ಸಹೃದಯತೆಯ ತುಂಬಿ
ನಿಂದ ಹೃದಯವಾಯಿತು ॥ ೨ ॥

ಸ್ತುತಿಯ ಮಾಡಿ ಶ್ರುತಿಯ ತೀಡಿ
ಸ್ಮೃತಿಯೊಳಮರವಾಗುವಂಥ
ನಾರಣಪ್ಪ ಪುರಂದರರ
ಅಮರ ಸರಸ ಸಮರಸ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಚೆಲುವರಾಯನ ಚೆಲುವು

(ಮೇಲುಕೋಟೆ)

ಮೇಲುಕೋಟೆಯ ಚೆಲುವರಾಯ ಚೆನ್ನಿಗ
ವರಕಾವೇರಿ ಎದುರಿಗಿರುವ ಯದುಗಿರಿಯ ಶ್ರೀಹರಿ || ಪ ||

ನಿನ್ನ ಉಡಿಯಲತಿ ವಿನಯದಿ
ನಡೆಯುತಿಹುದು ವೈರಮುಡಿ
ನಿನ್ನ ಗುಡಿಯಲತಿ ಭಕುತಿಯ
ಸತ್ಯಸೇವೆ ರಾಜಮುಡಿ || ೧ ||

ದೇವಮನುಜ ರಾಮಾನುಜರ
ಚೆಂದುಳ್ಳ ಚೆಲುವ ಪಿಳ್ಳೆ
ಶ್ರೀವೈಷ್ಣವ ಪಂಥದಂಥ
ಭಕ್ತಕೋಟಿಗೆಲ್ಲ ಮೇಲು || ೨ ||

ರತ್ನಖಚಿತ ಕಿರೀಟಧಾರಿ
ಶಂಖಚಕ್ರಧರ ಮುರಾರಿ
ಕೋಪ ತಾಪ ವ್ಯಾಪ ಬಿಡಿಸಿ
ಸನ್ಮತಿಯ ಕೊಟ್ಟು ಸಲಹೋ || ೩ ||

Sri Vidyabharathi Book Centre, Sringeri

CC-O. In Public Domain. Digitized by eGangotri

ಚೆನ್ನಿಗರಾಯನ ಚೆಲುವು

(ಮೇಲುಕೋಟೆ)

ಚೆನ್ನಿಗರಾಯನ ಚೆಲುವು
ರಾಮಾನುಜಾಚಾರ್ಯರೊಲವು
ಮೇಲುಕೋಟೆ ನೆಲವು
ಸಕಲರಿಗೆ ಬಲವು || ಪ ||

ಇಂದಿರಾರಮಣ ಚಂದಿರವದನ
ಚಂದನ ಭೂಷಿತ ಆನಂದ ಕಂದ
ನಂದಮುಕುಂದ || ೧ ||

ಗೋಪಾಲ ಮೂರುತಿ ತಾಣವೆ ತಿರುಪತಿ
ಯದುಗಿರಿಯ ಶ್ರೀಪತಿರಾಯಗಾರುತಿ
ನೀಡುವದು ಮುಕುತಿ || ೨ ||

ವೈರಮುಡಿ ವೈಭವ ರಾಜಮುಡಿ ಮುಡಿಪು
ಒಡೆಯಗೆ ಇಡಿಯಾಗಿ ಮುಡಿಬಾಗಿ ನಿಂದು
ಧನ್ಯ ನಾನಿಂದು || ೩ ||

Sri Vidyabharathi Book Centre, Sringeri

CC-O. In Public Domain. Digitized by eGangotri

ಉದ್ಧರಿಸು ತಂದೆ

(ಶ್ರೀರಂಗ ಪಟ್ಟಣ)

ಉದ್ಧರಿಸು ತಂದೆ ನಿನ್ನ ಬಳಿಯಲಿ ಬಂದೆ
ಶ್ರೀ ರಂಗನಾಥಾ, ನಾಥಾ ॥ ಪ ॥

ಕಾವೇರಿ ಧರೆಗಿಳಿದು ನಿನ್ನ ಪಾದವ ತೊಳೆದು
ಧನ್ಯಳಾಗುತ ವರವ ಪಡೆದು ಮುನ್ನಡೆದು
ಕನ್ನಡದ ನೆಲದಲ್ಲಿ ನಿನ್ನ ಮಹಿಮೆಯ ಬಿತ್ತಿ
ಹಸಿರಾಗಿ ಹೊನ್ನ ಬಸಿರಾಗಿ ಮೆರೆದನಳು ॥ ೧ ॥

ಸಂಸಾರ ಸಾಗರದಿ ಬಳಲಿ ಬೆಂಡಾದೆ
ಕಲಿಯುಗದ ಬೇಗೆಯಲಿ ನಾ ನೊಂದು ಬೆಂದೆ
ಶ್ರೀ ರಂಗಪುರದ ಗುಡಿ ಗೋಪುರದಿ ನಿಂದೆ
ಸೃಷ್ಟಿಗೊಡೆಯನ ದೃಷ್ಟಿ ಸಾಲದೇ ಎಂದೆ ॥ ೨ ॥

ಎಲ್ಲಿ ಸಿರಿದೇವಿ, ಹರಿ ಭೂದೇವಿ ಎಲ್ಲಿ
ಕೊಡಗಿನಾ ಕಾವೇರಿ ಇಬ್ಭಾಗವಾದಳೇ
ಪದ್ಮನಾಭನೆ ನಿನ್ನ ನಾಭಿಪದ್ಮವು ಎಲ್ಲಿ
ಸಿರಿ ಎಲ್ಲ ಧರೆಯಿಂದ ಮರೆಯಾಯಿತೇಕೆ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಚೆಲುವ ನೋಡೋಣ

(ಶ್ರೀರಂಗ ಪಟ್ಟಣ)

ಶ್ರೀರಂಗಪಟ್ಟಣದ ಚೆನ್ನಿಗರಾಯನ
ಚೆಲುವ ನೋಡೋಣ ಸಖಿ ಓಡಿ ಓಡಿ ಬಾ ॥ ಪ ॥

ನೋಡೋಣ ಬಾ ಸಖಿ ಅಖಿಳಾಂಡಕೋಟಿ
ಬ್ರಹ್ಮಾಂಡ ನಾಯಕ ಗೋಪಾಲನ ॥ ಅ. ಪ. ॥

ಕಾವೇರಿ ಜಲದಲಿ ಭಕ್ತಿಯ ಮದದಲಿ
ರಂಗನ ಒಡಲಲಿ ಒಡನಾಡುವಾ । ಶ್ರೀ ರಂಗನ
ಹರಿನಾಮ ಮನದಲಿ ವೈಕುಂಠ ವನದಲಿ
ಕುಣಿಯೋಣ ಮುದದಲಿ ಓಡಿ ಓಡಿ ಬಾ ॥ ೧ ॥

ಮದ್ದಳೆ ಜಾಗಟೆ ಶಂಖದ ನಾದದಿ
ಧೂಪದ ಆರತಿ ಮಾಡೋಣ ಬಾ । ಬಾ ಧೂಪದ
ತದ್ಧಿಮಿ ಧಿಮಿಕೆಂದು ಗೆಜ್ಜೆಯ ತಾಳದಿ
ಹೆಜ್ಜೆಯ ಹಾಕುತ ವೈಮುರೆಯುತ ॥ ೨ ॥

ಹರಿದಾಸರಂದು ಧಾವಿಸಿ ಬಂದು
ಪಾವನರಾದರು ದರುಶನದಿ । ಹಾ ಪಾವನ
ಸದ್ವೈಷ್ಣವರ ವರ ದೇವಾಧಿದೇವರ
ಮಹಿಮೆಯ ಕೊಂಡಾಡಿ ಹಾಡಿ ಬೇಡುವ ॥ ೩ ॥

Sri Vidyabharathi Book Centre, Shringeri

CC-O. In Public Domain. Digitized by eGangotri

ಹಯವದನನ ಸದನದಲಿ

(ಸೋದೆ ಕ್ಷೇತ್ರ)

ಹಯವದನನ ಈ ಸದನದಲಿ
ಬನ್ನಿ ವಾದಿರಾಜ ಜಯವೆನ್ನಿ || ಪ ||

ದ್ವೈತ ಮತದ ಸದ್ಗುರು ನೀನಾಗಿ
ಜಾತಿ ಮತಗಳಾ ಭೇದನ ನೀಗಿ
ಬಾಳಲು ಹೇಳಿದೆ ಮಾನವನಾಗಿ
ಮಾನವ ಜೀವನ ಸಫಲತೆಗಾಗಿ || ೧ ||

ಸೋದೆಯ ಅರಸರ ಸಿರಿಸೊತ್ತಾಗಿ
ಭಕುತಿಲಿ ಪಾಡಿದ ನುಡಿಮುತ್ತಾಗಿ
ಹರಿಯನು ಒಲಿಸಿದೆ ರಸವತ್ತಾಗಿ
ಅಶ್ವದ ರೂಪದಿ ವಿಶ್ವಕೆ ತೋರಿ || ೨ ||

ಸೋದೆಗೆ ಬಂದೆ ನೀ ಮುನಿಯಾಗಿ
ತಂದೆ ತ್ರಿವಿಕ್ರಮನಾ ವರವಾಗಿ
ಭಕ್ತಿಯು ಬೆಳೆಯಲು ಹೆಮ್ಮರವಾಗಿ
ಮುಕ್ತಿಯ ಮಾರ್ಗಕೆ ಚೇತನವಾಗಿ || ೩ ||

Sri Vidyabharathi Book Centre, Sringeri

CC-O. In Public Domain. Digitized by eGangotri

ವಾದಿರಾಜರ ಸನ್ನಿಧಿ

(ಸೋದೆ ಕ್ಷೇತ್ರ)

ಸೋದೆ ಕ್ಷೇತ್ರದ ಪಾವನ ಮಧುಬನದಿ
ವಾದಿರಾಜರ ಸನ್ನಿಧಿ ಕ್ಷೇಮನಿಧಿ ॥ ಪ ॥

ಭವಬಂಧನದಲಿ ನಾ ಬಲು ನೊಂದೆ
ಕಷ್ಟ ನಷ್ಟಗಳ ಉರಿಯಲಿ ಬೆಂದೆ
ಗತಿಗಾಣದೆ ನಿನ್ನಡಿಯಲಿ ಬಂದೆ
ವಾದಿರಾಜ ಗುರು ಸಲಹೊ ತಂದೆ ॥ ೧ ॥

ಭೂತ ಪ್ರೇತ ಪರದಾಟವೆ ಇರಲಿ
ಭೀತಿ ಭ್ರಾಂತಿಗಳ ಕಾಟವೆ ಬರಲಿ
ಮಂತ್ರ ತಂತ್ರ ಮಾಟದ ಆಟ
ನಡೆಯದು ನಿನ್ನ ಕವಾಟದಲಿ ॥ ೨ ॥

ದಶಾವತಾರದ ಸ್ತೋತ್ರವ ಜಪಿಸಿ
ಭೂಸುರರ ಮೃತಿ ಭೀತಿಯ ಬಿಡಿಸಿ
ಬಂಗಾರದ ಬೆಳೆ ಇಳೆಯೊಳು ಬೆಳೆಸಿ
ಮಧ್ವಮತೋದ್ಧರ ನೀ ಪೊರೆದೆ ॥ ೩ ॥

ಹಯಗ್ರೀವನ ಹರಿವಾಣದಿ ಬಡಿಸಿ
ಹಯವದನನ ರೂಪದ ಹರಿಗುಣಿಸಿ
ಮೇಘನ ಓಡಿಸಿ ಮಳೆಯನು ನಿಲಿಸಿ
ಸುರಿಸಿದೆ ನಿನ್ನ ಪವಾಡ ಪುಷ್ಪಮಳೆ ॥ ೪ ॥

CC-O. In Public Domain. Digitized by eGangotri

ಪಂಚಮುಖಿ ಪ್ರಾಣದೇವರು

(ಗಾಣಧಾಳ)

ಮಧ್ವಮತೋದ್ಧರ ರಾಘವೇಂದ್ರ
ರಾಘವೇಂದ್ರರ ಪ್ರಾಣ
ಪಂಚ ಪ್ರಾಣ ಪಂಚಮುಖಿ
ಪ್ರಾಣದೇವನಿವ ಪವಮಾನ ॥ ಪ ॥

ತುಂಗಭದ್ರೆಯ ಮೂಡಣದಿ
ರಾಘವೇಂದ್ರರ ಸನ್ನಿಧಿಯು
ಪಡುವಣದಲಿ ಗುರುರಾಯರ
ರಾಮ ನಾಮದ ನವನಿಧಿಯು ॥ ೧ ॥

ವಾನರ ಸೇನೆಯೆ ನೆರೆದಿಹುದು
ರಾಮಾಯಣವನು ಸ್ಮರಿಸಿಹುದು
ಭವ್ಯಬಂಡೆಗಳಂತರಿಕ್ಷದಿ
ಅನಂತ ರಕ್ಷೆಯ ಸಾರಿಹುದು ॥ ೨ ॥

ರಾಯರಿಲ್ಲಿ ತಪಗೈದಿಹರು
ಲೋಕಕೆ ಶಾಂತಿಯ ಬಯಸಿದರು
ಸಂಗೀತದ ಹೊಳೆ ಹರಿಸಿದರು
ಪವಾಡ ಮಳೆಯನು ಕರೆಸಿದರು ॥ ೩ ॥

ಹರಿಸರ್ವೋತ್ತಮನೆಂದಿರಲು
ವಾಯುಜೀವೋತ್ತಮು ಬಂದಿರಲು
ಗಾಣಧಾಳದ ಧೂಳಿ ಕಣಕಣ
ಬಾಳ ಭಾಗ್ಯದ ಹೊಂಗಿರಣ ॥ ೪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಬಂದು ನಿಂದ ನಾನಿರುವೆನೆಂದ

:(ಗಾಣಧಾಳ)

ಬಂದು ನಿಂದ, ನಾನಿರುವೆನೆಂದ
ಗುರುರಾಯರ ಕರೆತಂದ
ಶ್ರೀರಾಮದೂತ ಪರಮಪುನೀತ
ಮಂತ್ರಾಲಯ ನೋಡೆಂದ ॥ ಪ ॥

ದಟ್ಟ ಬಿಸಿಲಿನ ಬಿಸಿ ಬೆಟ್ಟದಲ್ಲಿ
ಬೀಡು ಬಿಟ್ಟ, ದಿಟ್ಟ ದಿಟ್ಟ ಹೆಜ್ಜೆ ಇಟ್ಟ
ಪಣವನು ತೊಟ್ಟ, ವರಗಳ ಕೊಟ್ಟ
ರಾಮ ನಾಮ ಮರಗಳ ನೆಟ್ಟ ॥ ೧ ॥

ಹನುಮ ಭೀಮ ಮಧ್ವಾವತಾರ
ಮೂಲ ರಾಮನಾಮವೇ ಆಧಾರ
ಲಂಕೆಯ ಸುಡಿಸಿ ಅಸುರರನೋಡಿಸಿ
ಧರ್ಮವನುಳಿಸುವ ಕೋಲಾಹಲ ॥ ೨ ॥

Sri Vidyabharathi Book Centre, Shringeri

CC-O. In Public Domain. Digitized by eGangotri

ಬಿಳಿಗಿರಿ ರಂಗ

(ಬಿಳಿಗಿರಿ)

ಬಿಳಿಗಿರಿ ರಂಗನ, ಚೆಂದುಳ್ಳ ಚೆಲುವನ
ದರುಶನ ಮಾಡುವಾs ‖ ಪ ‖

ಪೊಡವಿಯೋಳ್ ಇಂಥ ಅಡವಿಯ
ಅಡವಿಯೋಳ್ ಕಾಡದ ಕಾಡು ಮೃಗಗಳ
ರಂಗನಾಣೆ ಕಾಣೆ ನಾ, ಈ ರಮ್ಯ ನೋಟವ ‖ ೧ ‖

ಹೇ ಸೃಷ್ಟಿಕರ್ತನೆ ಪೇಳು
ಸೃಷ್ಟಿಗೆ ದೃಷ್ಟಿಯ ದೋಷ ತಾಗಿತೆ
ನೆಲೆಗೊಳ್ಳಲಿ ಸಂತಸ ವನಸಿರಿ ಸಂಪದ ‖ ಪ ‖

ಶ್ವೇತಾದ್ರಿ ಭಾವ ಕಾವನಾ
ಪಾದದಿ ಇರಿಸಿದ ಭಕ್ತಿ ಭಾವನಾ
ಜಗವನೆಲ್ಲ ತುಂಬಲಿ, ಮಂಗಲ ಮೊಳಗಲಿ ‖ ೩ ‖

Sri Vidyabharathi Book Centre, Sringeri

CC-O. In Public Domain. Digitized by eGangotri

ಕನ್ನಡದ ಮನೆ ಮನೆಯು

(ಮಂತ್ರಾಲಯ)

ಕನ್ನಡದ ಮನೆ ಮನೆಯು ಮಂತ್ರಾಲಯ
ಕಲಿಯುಗದಿ ಜನಮನದ ದೇವಾಲಯ ॥ ಪ ॥

ನಿನ್ನ ಕರುಣೆಯ ಸಿರಿಯು ಹಸಿರು ಕ್ರಾಂತಿಯ ಉಸಿರು
ಕನ್ನಡದ ನೀರು ನೆಲ ಹೊನ್ನ ಕಾಂತಿಯ ಬಸಿರು
ವಿಶ್ವಶಾಂತಿಯ ದಿವ್ಯ ಸಂದೇಶಕಿದು ಹೆಸರು
ಕಾಮಧೇನು ನೀ ಇತ್ತ ಕೆನೆ ಹಾಲು ಮೊಸರು ॥ ೧ ॥

ಊರು ಊರುಗಳಲ್ಲಿ ಕೇರಿ ಕೇರಿಗಳಲ್ಲಿ
ಸಾರುತಿದೆ ತವ ಮಹಿಮೆ ತೂರಿ ತೂರಿ
ಗತಿ ನೀನೆ ಯತಿವರ್ಯನೆಂದು ಸಾರಿ
ಒಂದಾಗಿ ಬಂದಿಪರು ಭೇದ ಭಾವ ಮೀರಿ ॥ ೨ ॥

ನಿನ್ನ ವೀಣೆಯ ಕರೆಯ ಕೆರೆಯಲ್ಲಿ ಮಿಂದೆ
ನಿನ್ನ ತುಂಗೆಯ ನೆರೆಯ ಕರೆಯಲ್ಲಿ ನಿಂದೆ
ಕಲ್ಪವೃಕ್ಷವೆ ನೀನು ಕರೆದಲ್ಲಿ ಬಂದೆ
ಬೇಡಿದಾ ವರ ನೀನು ಕರದಲ್ಲಿ ತಂದೆ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪ್ಪ ಯಲಗುರದಪ್ಪ

(ಯಲಗೂರು)

ಅಪ್ಪ ಯಲಗುರಪ್ಪ
ಏಳಪ್ಪ ಏಳು
ತಪ್ಪ ಒಪ್ಪಿಕೊಂಡೇನಯ್ಯ
ಮೊರೆಯ ಕೇಳು ‖ ಪ ‖

ನಾನು ನನ್ನದೆಂಬ ಹಾಳು ಮೋಹದಲ್ಲಿ ಇಂದು
ಮಾನ ಪ್ರಾಣ ಸಂಪತ್ತುಗಳ ದಾಹದಲ್ಲಿ ಬೆಂದು
ಪ್ರಾಣ ನಿನ್ನ ನಾ ಮರೆತು ನಿರುತ ನೊಂದೆ
ಭಾರತೀರಮಣನ ಮಹಿಮೆ ಅರಿತು ಬಂದೆ ‖ ೧ ‖

ರಾಮಲಕ್ಷ್ಮಣ ಸೀತೆ ಪದವನೂರಿದೇಳೂರು
ರಾಮಾಯಣ ಸಾರುತ ಇರಲು ನೀನು ಬಂದೆಯ
ಕಲಿಯ ಕಲ್ಮಷ ಶೂಲದಿಂದೆನ್ನ ಕಾಪಾಡು
ಭೀತಿ ಭ್ರಾಂತಿ ನೀಗಿಸಿ ಹರಸಿ ಶಾಂತಿ ನೀಡು ‖ ೨ ‖

ಹುಸಿಯೇ ಇಲ್ಲವಂತೆ ಬೇಡಿ ಫಲವ ಪಡೆಯಲು
ಮುಕ್ತ ಮನಸಿನಿಂದ ಅಪ್ಪ ನಿನ್ನ ನೆನೆಯಲು
ನೀನು ಇದ್ದೆಡೆ ರಾಮನಿದ್ದು ಕಾನನಯ್ಯ
ಮಂದಮತಿಗೆ ಜ್ಞಾನಧನವ ಇತ್ತು ಪಾಲಿಸು ‖ ೩ ‖

Sri Vidyabharathi Book Centre, Sringeri

CC-O. In Public Domain. Digitized by eGangotri

ಹರಿದಾಸರ ನಾಡು

(ಕರ್ನಾಟಕ)

ಭಕ್ತಿ ಹೊಳೆಯನೆ ಹರಿಸಿದರು ಹರಿ–
ದಾಸರೋ ಹರಿದಾಸರು ‖ ಪ ‖

ತಾನು ತನ್ನದು ಎಲ್ಲ ಮರೆತು
ಜಗವು ಹರಿಮಯವೆನ್ನುತ ‖ ಅ. ಪ. ‖

ದಾಸಶ್ರೇಷ್ಠರಿಗೇ ಗರಿಷ್ಠರು
ಸಿರಿಪುರಂದರ ದಾಸರು
ಆದಿಕೇಶನನೊಲಿಸಿ ಮುಕ್ತಿಯ
ಹಾದಿ ತೋರಿದ ಕನಕರು ‖ ೧ ‖

ಮಧ್ವಮತವೇ ಜಗಕೆ ತಾರಕ
ಹರಿಯೆ ಸರ್ವರಿಗುತ್ತಮ
ಹನುಮ ಶ್ರೀಹರಿಯಾಜ್ಞೆಧಾರಕ
ಎಂಬ ಸತ್ಯವ ಸಾರುತ ‖ ೨ ‖

ಉಡುಪಿ ಕೃಷ್ಣನ ಚೆನ್ನಕೇಶನ
ಕಾಗಿನೆಲೆಯಾ ದರುಶನ
ಮೇಲುಕೋಟೆಯ ರಂಗನಾ ಶ್ರೀ.
ರಂಗಪಟ್ಟಣ ನೋಡುತ ‖ ೩ ‖

Sri Vidyabharathi Book Centre, Sringeri

CC-O. In Public Domain. Digitized by eGangotri

ದೇವೀ ದರ್ಶನ

Sri Vidyabharathi Book Centre, Sringeri

CC-O. In Public Domain. Digitized by eGangotri

ತುಂಗಾ ತೀರದಿ ನೆಲಸಿದೆಯಮ್ಮ

(ಶೃಂಗೇರಿ ಕ್ಷೇತ್ರ)

ತುಂಗಾ ತೀರದಿ ನೆಲೆಸಿದೆಯಮ್ಮ
ಜ್ಞಾನದ ನಂದಾದೀಪವ ಬೆಳಗುತ ॥ ಪ ॥

ಶೃಂಗೇರಿಯ ಸಿರಿ ಸುಂದರ ಬನದಲಿ
ವಿದ್ಯಾರಾಧಕ ಭಕುತರ ಮನದಲಿ
ಆದಿಗುರು ಶ್ರೀ ಶಂಕರ ಸನ್ನುತ
ಗೀತಪ್ರಿಯ ಸಂಗೀತ ವಿಶಾರದೆ ॥ ೧ ॥

ಪದ್ಮಾಕ್ಷಿ ನಿಜ ಪಾದಪದ್ಮಳೇ
ಪದ್ಮವಿರಾಜಿಣಿ ನಾಗವೇಣಿ
ವೀಣಾಪಾಣಿ ಪ್ರಣವ ಸ್ವರೂಪಿಣಿ
ಅಮೃತವರ್ಷಿಣಿ ಭವ ಭಯ ಹಾರಿಣಿ ॥ ೨ ॥

ಮಂಗಳಮುಖಿ ನಿನ್ನಂಗಳದೊಳಗೆ
ತಿಂಗಳ ತಿಳಿ ಬೆಳದಿಂಗಳ ಸುಧೆಯೊಳು
ಎನ್ನಯ ಕಂಗಳ ಜ್ಯೋತಿಯೆ ಶಾರದೆ
ದರುಶನ ನೀಡಿ ಕಂಗೊಳಿಸಮ್ಮ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಶೃಂಗ ಗಿರಿಯಲಿ ಶೃಂಗಾರ ಸರಸತಿ

(ಶೃಂಗೇರಿ ಕ್ಷೇತ್ರ)

ಶೃಂಗಗಿರಿಯಲಿ ಶೃಂಗಾರ ಸರಸತಿ
ಜಗಜ್ಜನನಿ ಶಾರದೆಗೆ ಮಂಗಳಾರತಿ ॥ ಪ ॥

ಜಗದಧೀಶ್ವರಿ ಅಂಬೆ ತ್ರಿಪುರಸುಂದರಿ
ಶಂಕರಾಚಾರ್ಯ ವಂದಿತೇ ನಮೋಸ್ತುತೇ ॥ ೧ ॥

ಪದ್ಮಮುಖಿಯಳೇ ಪದ್ಮಾಕ್ಷಿ ಲಲಿತೆಯೇ
ಪಾಣಿಪದ್ಮಳೇ ಹೃದಯ ಪದ್ಮರಾಜಿತೇ ॥ ೨ ॥

ಗಾನಲೋಲಳೇ ಜ್ಞಾನಲೋಕಪಾಲಳೇ
ಪಾಶಾಂಕುಶಧಾರಿಣಿ ಶೋಕಹಾರಿಣಿ ॥ ೩ ॥

ವೀಣೆ ಪಿಡಿದಳೇ ವಾಣಿ ಮುದದಿ ಒಲಿದಳೇ
ನಾಗವೇಣಿಯೇ ರಾಗ ತುಂಬಿ ನುಡಿದಳೆ ॥ ೪ ॥

ಗೀತಪ್ರೀಯಳೇ ಸಂಗೀತ ರಂಜಿತೇ,
ರಾಗಭಾವ ಭಕ್ತಿ ಸ್ತೋತ್ರ ನೃತ್ಯ ಮೋಹಿತೆ ॥ ೫ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಕರ್ನಾಟಕ ಮಾತೆ

(ಮೈಸೂರು)

ಕರ್ನಾಟಕ ಮಾತೆ ಚಾಮುಂಡಿದೇವಿ
ಭಾರತಾಂಬೆಯ ಸಿರಿಯ ತವರೂರು ಮೈಸೂರು ॥ ಪ ॥

ಇಂದ್ರನಮರಾವತಿಯ ನಾಚಿಸುವ ನಗರದಿ
ಚಂದ್ರನೊಲು ಬೆಟ್ಟದಾ ಶಿಖರದಲಿ ಸಡಗರದಿ
ಚಂದನದ ನಾಡು ವನಸಿರಿಯ ಆಗರದಿ
ನೆಲೆಸಿದಿ ಭವದಲ್ಲಿ ವೈಭವದಿ ಮುದದಿ ॥ ೧ ॥

ಆದಿಶಕ್ತಿ ತಾಯೆ ಕಾಯೆ ತ್ರಿಭುವನ ಜನನಿ
ವಿಶ್ವಕಾರಿಣಿ ಖಡ್ಗಶೂಲ ಧಾರಿಣೀ
ಕಾತ್ಯಾಯಿನೀ ಮಾಯೆ ಭುವನೇಶ್ವರಿ ದೇವಿ
ಸರ್ವಮಂಗಳೆ ನೀಡು ಅಭಯ ಹಸ್ತ ॥ ೨ ॥

ಭೂಸುರರ ಸಲಹಿದಿ ವರದಹಸ್ತವ ತೋರಿ
ಕವಿಗಳಿಗೆ ಭವಿಯಾಗಿ ಜ್ಞಾನಘನ ಬೀರಿ
ದುಷ್ಟರನು ಸಂಹರಿಸಿ ಶಿಷ್ಟರನು ಹರಸಿದೆ
ಇಷ್ಟದೇವತೆಯಾಗಿ ಕಷ್ಟವೆಲ್ಲವ ನೀಗಿ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಚಾಮುಂಡಿ ನಯೆ ತೋರೆ

(ಮೈಸೂರು)

ಚಾಮುಂಡಿ ದಯೆ ತೋರೆ ದೇವಿ
ಕನ್ನಡ ನಾಡಿನ ಕಣ್ಮಣಿ ತಾಯೇ ॥ ಪ ॥

ಹಿಂದೆ ನೀ ಭೂಸುರ ಕುಲವನುದ್ಧರಿಸಿ
ಕುಂದದ ಭಾಗ್ಯದ ಬಾಗಿಲು ತೆರೆಸಿ
ಧರೆಯೊಳು ನಿನ್ನಯ ಮಹಿಮೆಯ ಮೆರೆಸಿ
ಅವತರಿಸಿದಿ ಜಯಮಾಲೆಯ ಧರಿಸಿ ॥ ೧ ॥

ಮಹಿಷಾಸುರನನು ಮರ್ದಿಸಿದವಳೆ
ದುಷ್ಟರ ಶಿಕ್ಷಿಸಿದಾ ರಣಚಂಡಿ
ಕಲಿಕಾಲದ ಅಬ್ಬರವನು ತಗ್ಗಿಸಿ
ಮಾನವ ಕುಲವನು ಉದ್ಧರಿಸಮ್ಮ ॥ ೨ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂಬೆ ಮೂಕಾಂಬಿಕೆ

(ಕೊಲ್ಲೂರು ಕ್ಷೇತ್ರ)

ಅಂಬೆ ಮೂಕಾಂಬಿಕೆಯೆ ನಿನ್ನಲಿರಿಸಿದ ಭಕ್ತಿ
ಇಹದಲ್ಲಿ ಶಕ್ತಿಯು ಪರದಲ್ಲಿ ಮುಕ್ತಿ ॥

ಕಲೆಯ ಆಗರವಾಗಿ ಸ್ನೇಹ ಸಾಗರವಾಗಿ
ಮಿಗಿಲಾಗಿ ನಿನ್ನ ದಯೆ ಮುಗಿಲೆತ್ತರಕೆ ಸಾಗಿ
ವಂದಿಸಿದವರ ಬಿಡದೆ ಸಂಧಿಸಿದ ತಾಯೇ
ನಿಂದಿಸಿದ ಅಧಮರನು ಬಂಧಿಸಿದ ಮಾಯೆ ॥ ೧ ॥

ವರ್ಣಭೇದವನಳಿದ ಸ್ವರ್ಣಮುಖಿ ನಿನ್ನ
ವರ್ಣಿಸಿದ ಧರಣಿಯೊಳು ವರುಣನನು ಕರುಣಿಸಿದೆ
ವರ್ಣಿಸಲು ಸಿಗದಮ್ಮ ವರ್ಣಮಾಲೆ
ಸೌಪರ್ಣಿಕೆಯ ಪರ್ಣಕುಟಿಗೆ ವರವಾದೆ ॥ ೨ ॥

ಕೋಲಋಷಿ ಭಕ್ತಿಯಲಿ ನಿನ್ನ ಮೊರೆ ಹೋಗಲು
ಮೂಕರಾಗಿಸಿ ಅಸುರರಾ ಅಸುವ ಕಳೆದೆ
ಮುನಿಯ ಕೋರಿಕೆಗಾಗಿ ದೇವತೆಗಳೊಡಗೂಡಿ
ಕೋಲೂರ ಮೂಕಾಂಬಿಕೆಯಾಗಿ ನಿಂದೆ ॥ ೩ ॥

ವನದ ಸಿರಿಯೊಳು ನೆನೆದ ಭಕ್ತರ ಮನದೊಳಗೆ
ಕುರುಡರಿಗೆ ಕಣ್ಣಾಗಿ ಕಿವುಡರಿಗೆ ಕಿವಿಯಾಗಿ
ಮುಂದಮುತಿಗಳಿಗೆ ಅತಿ ಜ್ಞಾನಗತಿ ಇತ್ತೆ
ಮೂಕರನು ನುಡಿಸಿ ತಾಪತ್ರಯವ ಬಿಡಿಸಿ ॥ ೪ ॥

Sri Vidyabharathi Book Centre, Amritapuri

CC-O. In Public Domain. Digitized by eGangotri

ಸೌಪರ್ಣಿಕೆ ತೀರದಲಿ

(ಕೊಲ್ಲೂರು ಕ್ಷೇತ್ರ)

ಸೌಪರ್ಣಿಕೆ ನದಿಯ ತೀರದಲಿ
ತೀರದ ಆಶೆಯ ತೀರಿಸುವ
ಬೇಡಿದ ಫಲ ಈಡೇರಿಸುವ
ಮೂಕಾಂಬಿಕೆಯನು ಪೂಜಿಸುವಾ ॥ ಪ ॥

ಕೋಲೂರಿನ ಪಾವನ ಧರಣಿ
ಶರಣರ ಕಾಯ್ವಳು ಘನ ಕರುಣಿ
ಮಂಗಲಕಾರಿಣಿ ಭಯಹಾರಿಣಿ
ಅಮೃತವರ್ಷಿಣಿ ಆಕರ್ಷಿಣಿ ॥ ೧ ॥

ಕೋಲಮುನಿಗೆ ನೀ ವರವಾಗಿ
ಮೂಕತನವು ಅಸುರರಿಗಾಗಿ
ಸುರರೆಲ್ಲರಿಗಾಸರೆಯಾಗಿ
ನಿಂದಳು ಮೂಕಾಂಬಿಕೆಯಾಗಿ ॥ ೨ ॥

ಶ್ರೀದೇವಿಯ ಅಂದ ಚೆಂದ
ಶಾರದೆ ರೂಪವೆ ಆನಂದ
ಶಕ್ತಿಸ್ವರೂಪಿಣಿ ಚಾಮುಂಡಿ
ವರಗಳ ಈವಳು ಮುದದಿಂದ ॥ ೩ ॥

Vidyaranya Bharathi Book Centre, Sringeri

CC-O. In Public Domain. Digitized by eGangotri

ಉಗರಗೊಳ್ಳದ ದೇವಿಗೆ

(ಸವದತ್ತಿ ಕ್ಷೇತ್ರ)

ಮಂಗಳಾರುತಿ ತಂದು ಬೆಳಗಿರೆ
ಉಗರಗೊಳ್ಳದ ದೇವಿಗೆ ॥ ಪ ॥

ಕರವ ಜೋಡಿಸಿ ವರವ ಬೇಡಲು
ಕರುಣಿಸುವ ಎಲ್ಲಮ್ಮಗೆ
ಮಂದಗಮನೆಯರಿಂದು ಅಂದದಿ
ಮಂದಹಾಸವ ಬೀರುತ ॥ ೧ ॥

ಕಮಲಮುಖಿಯಳಿಗಖಿಳ ಸಖಿಯರು
ನಿಖಿಳ ಭಕುತಿಯ ಬೆಳಕಲಿ
ಪರಿಮಳದ ಸುಮಗಳನು ಸುರಿಸುತ
ಪರಿಪರಿಯ ಸ್ತುತಿ ಮಾಡುತ ॥ ೨ ॥

ಪರಶುರಾಮನ ತಾಯಿಗೆ ಜಮ-
ದಗ್ನಿ ಋಷಿಯ ಪ್ರಿಯಳಿಗೆ
ಏಳುಕೊಳ್ಳದ ಸಿರಿಯ ಮುಖ್ಯದಿ
ಕಲ್ಲಿನಲಿ ಪುಟ್ಟಿಹಳಿಗೆ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಉಘೋ ಉಘೋ ತಾಯಿ

(ಸವದತ್ತಿ ಕ್ಷೇತ್ರ)

ಉಘೋ ಉಘೋ ತಾಯೀ, ಮಾಯಿ
ಉಘೋ ಉಘೋ ದೇವಿ ॥ ಪ ॥

ಭಾಳ ಮುಂದಿಗೆ ನೀ ಬತ್ತಲೆ
ಕುಣಿಸ್ಯಾಡಿದೆಯವ್ವ
ಪಡಲಿಗಿ ಕೊಡ ಹೊರಿಸಿ ಸೊಂಟದ
ಮ್ಯಾಲ ಕೈಯ ಇರಿಸಿ ॥ ೧ ॥

ಅತ್ತಿಯ ಚಿಂತ್ಯಾಕ ನೀ ಕಿಸನ-
ದತ್ತಿಯಲಿರಲಾಕ
ಭಂಡಾರ ಸುರಿಸನ್ವ ಬಾಳ
ಭಂಗಾರ ಮಾಡವ್ವ ॥ ೨ ॥

ಮರಳ ಕೊಡವ ಮಾಡ್ದೆ ಸರ್ಪದ
ಸುರುಳಿಯ ಮೇಲಿರಿಸಿ
ದುರುಳರ ಕಾಡಿದೆಯವ್ವ ಜನರಿಗೆ
ಮರುಳ ಮಾಡಿದೆಯವ್ವ ॥ ೩ ॥

ಬೇವನುಡಿಸಿ ನಡೆದೆ ಚೌಡಕಿ
ಭಾವವಿಡಿಸಿ ನುಡಿಸಿ
ಸೀರೆಯುಡಿಸಿ ನೋಡ್ದೆ ಗಂಡಿಗೆ
ಒಡ್ಯಾಣವ ತೊಡಿಸಿ ॥ ೪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ದೇವಿ ಶಂಕರಿ

(ಬಾದಾಮಿ–ಬನಶಂಕರಿ)

ದೇವೀ ಶಂಕರಿ
ಸುಂದರ ಬನದಲಿ ಬಂದೆ
ಮನಮಂದಿರದಲಿ ನಿಂದೆ ॥ ಪ ॥

ದುಷ್ಟ ಕುಲ ಸಂಹಾರಿಣಿ ಕರುಣಿ
ಸುಜನ ಮಂಗಲಕಾರಿಣಿ
ವಜ್ರಾದಪಿ ಕಠೋರಾಣಿ
ಮೃದೂನಿ ಕುಸುಮಾದಪಿ ॥ ೧ ॥

ಶಕ್ತಿ ಸರಸ್ವತಿ ಲಕ್ಷ್ಮಿ ರೂಪಿಣಿ
ವಿದ್ಯಾ ಬುದ್ಧಿ ಪ್ರದಾಯಿನಿ
ಜಗಜ್ಜನನಿ ಜಗನ್‌ಮೋಹಿನಿ
ಕಷ್ಟ ನಷ್ಟ ನಿವಾರಿಣಿ ॥ ೨ ॥

ಕಣ್ಣ ಕುಕ್ಕಲು ನಿನ್ನಯ ಜ್ಯೋತಿ
ಪುಣ್ಯ ಉಕ್ಕಲು ಸಂದಿಹರು
ಮಣ್ಣ ಮಕ್ಕಳು ಬಂದಿಹರು
ಹೊನ್ನ ಒಕ್ಕಲು ಕಾದಿಹರು ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಅಮ್ಮಾ ಎಂದ ಕಂದನ ಕರೆಗೆ

(ಬಾದಾಮಿ ಬನಶಂಕರಿ)

ಅಮ್ಮಾ, ಎಂದ ಕಂದನ ಕರೆಗೆ
ತಾಯಿಯು ಬರುವಂತೆ
ಬಂದಳೇ ಬನಶಂಕರಿ ಧರೆಗೆ ॥ ಪ ॥

ಪುತ್ರಹೀನರ ಉಡಿಯನು ತುಂಬಿ
ಕುಲವನು ಉದ್ಧರಿಸಿ
ಬಂಜರು ಭೂಮಿಲಿ ಬಂಗಾರ ಬೆಳೆದು
ಧವಸ ಧಾನ್ಯದಿ ತುಂಬಿ ತುಳುಕುತ ॥ ೧ ॥

ಗಂಧ ಸುಗಂಧದ ಪುಷ್ಪದಿ ವಿರಚಿತ
ಸೀರೆಯನುಡಿಸಿಹರು
ರುಚಿಯಾದ ಫಲಗಳ ಶುಚಿಯಾದ ಹಾರ
ಕಿರೀಟ ಮುಕುಟ ವಿರಾಜಿತೇ ಸಿರಿ ॥ ೨ ॥

ಲೋಕಮಾತೆ ಮಂಗಳದಾತೆ
ಶೋಕ ನಿವಾರಕಳೇ
ಕರುಣಾಕರಿ ಹೇ ಬನಶಂಕರಿ ಸಿರಿ
ದೇವಿ ಇವಳೆ ಅಭಯಂಕರಿ ॥ ೩ ॥

Sri Vidyaratha Book Centre, Sringeri

CC-O. In Public Domain. Digitized by eGangotri

ಮಾರೆಮ್ಮನ ಜಾತ್ರೆ

(ಶಿರಸಿ ಕ್ಷೇತ್ರ)

ಬೇಡಿದಾ ಭಾಗ್ಯ ನೀಡುವ
ಮಾರಿಯಾ ಜಾತ್ರೆ ನೋಡುವ || ಪ ||

ಒಲಿದರೆ ನಾರಿ ಮುನಿದರೆ ಮಾರಿ
ಮಾರಿಯ ಒಲಿಸುವ ದಾರಿಯ ಕೋರಿ || ಅ. ಪ. ||

ಡೋಲು ಕುಣಿತ ಕೋಲಿನಾಟ
ಅಂಕೆ ಹಾಕುವಂಥ ನೋಟ
ಮೇಟಿ ದೀಪವನ್ನು ಹಚ್ಚಿ
ಕೋಟಿ ಜನರು ಮೆಚ್ಚುವಂಥ || ೧ ||

ದೇವಿ ನಿನ್ನ ಮದುವೆ ಹೂಡಿ
ನೋಡಿ ನೋಡಿ ಪದವ ಹಾಡಿ
ಮೋಜ ನೀಡಿ ಮೋಡಿ ಮಾಡಿ
ಕಾಡಿ ಬೇಡಿ ಒಲಿಸುವಂಥ || ೨ ||

ಅತ್ಯಮೌಲ್ಯ ಕಿರೀಟಧಾರಿ
ಅಂದವಾದ ರಥವನೇರಿ
ಭಕುತ ಜನರ ಸಾರಿ ಸಾರಿ
ಚೆಲುವ ಬೀರಿ ಒಲವು ತೋರಿ || ೩ ||

ಉರಗ ಶಿರದಿ ಖಡ್ಗ ಕರದಿ
ಕನಕ ರತ್ನಾಭರಣಧರಣಿ
ಗದ್ದುಗೆಯನೇರಿ ನಿಂತ
ರೋಗಹರಣೆ ನಿನ್ನ ಸ್ಮರಣೆ || ೪ ||

Sri Vidyabharathi Book Centre, Sringeri

CC-O. ಎಂದು ಕಾಂಬೆನಮ್ಮ ನಿನ್ನ. Digitized by eGangotri

(ಶಿರಸಿ ಕ್ಷೇತ್ರ)

ಎಂದು ಕಾಂಬೆನಮ್ಮ ನಿನ್ನ
ಮಾರಿಕಾಂಬೆಯೇ
ಬಾಳನೌಕೆ ಮುಳುಗುತಿಹುದು
ಪಾರಗಾಣಿಸು ‖ ಪ ‖

ಆಸೆ ಎಂಬ ಸೆಳವಿಗೆ
ಬಾಳ ಸುಖದ ಸುಳಿವಿಗೆ
ಮೋಹ ಎಂಬ ದಾಹದಲ್ಲಿ
ಮಡುವಿನಲ್ಲಿ ಸಿಲುಕಿದೆ
ಅಂಬೆ ನಿನ್ನ ನಂಬಿ ಬಂದೆ
ಇಂದು ಕಾಣದೆ ‖ ೧ ‖

ಶಿರಸಿ ಸಿರಿಯ ಅರಸಿದೆ
ನಿನ್ನ ನಾಮ ಸ್ಮರಿಸಿದೆ
ಭಕ್ತಿರಸವ ಸುರಿಸಿ ಭಾವ
ತುಂಬಿ ರಾಗ ಬೆರೆಸಿದೆ
ತಾಳ ತಪ್ಪಿ ನಿಂತ ಬಾಳ
ಮೇಳಗೊಳಿಸಿದೆ ‖ ೨ ‖

Sri Vidyabharathi Book Centre, Sringeri

CC-O. Vasishtha Tripathi Collection. Digitized by eGangotri

ಸಾಣೆಕಲ್ಲಲಿ ಉದ್ಭವಿಸಿದೆ

(ಕಲ್ಲೂರು)

ಸಾಣೆಕಲ್ಲಲಿ ಉದ್ಭವಿಸಿದೆ
ಕನಸು ನನಸಲಿ ನೆಲೆಸಿದೆ
ಶ್ರೀ ಭೂದುರ್ಗೆ ಮೂರು ರೂಪದಿ
ಕಲ್ಲೂರಲಿ ನೀ ನೆಲೆಸಿದೆ ॥ ಪ ॥

ಎನಿತು ಪೇಳಲಿ ನಿನ್ನ ಮಹಿಮೆಯ
ಜಗದಿ ನಿನ್ನಯ ಹಿರಿಮೆಯ
ಆದಿ ಕೊಲ್ಹಾಪುರದ ಲಕ್ಷ್ಮಿಯ
ದಿವ್ಯ ದರುಶನ ತೋರಿದೆ ॥ ೧ ॥

ಹರಿಯ ವರಿಸುವ ಹಿರಿಯ ದೈವವೆ
ಸಿರಿಯ ಮೆರೆಸುವ ಆರಸಿಯೆ
ಸಂಕಟವ ಪರಿಹರಿಸು ಹರಸು
ವೆಂಕಟೇಶನ ಪ್ರೀಯಳೇ ॥ ೨ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಭಾಗ್ಯದ ಲಕ್ಷ್ಮಿ ಬಾರೆ

(ಕಲ್ಲೂರು)

ಭಾಗ್ಯದ ಲಕ್ಷ್ಮಿ ಬಾರೆ ಬಾರೆ
ಕನಕವೃಷ್ಟಿಯ ತೋರೆ
ನಾಡಿನ ನಾಡಿ ನಾಡಿಯಲಿ
ನಡೆ ನುಡಿಯಲಿ ಸಂಪದ ತಾರೆ ॥ ಪ ॥

ಕಲ್ಲೂರಿನ ಕಲ್ಲಿನ ಒಡಲು
ಒಡಲಲಿ ಮೆಲ್ಲನೆ ಒಡಮೂಡಿ
ಭಕ್ತರ ಸಂಗಡ ಒಡನಾಡಿ
ಹಾಡಿ ಹಾಡಿ ಹಾಡಿ ಕುಣಿದಾಡಿ ॥ ೧ ॥

ಅಚ್ಚ ಹಸಿರಿನ ಸಿರಿ ತುಂಬಿ
ದವಸಧಾನ್ಯಗಳ ಮಳೆ ಸುರಿಸಿ
ಸದ್ವಿಚಾರ ಆಚಾರದ ಐಸಿರಿ
ಭ್ರಾತೃಭಾವನೆಯ ತುಳುಕಿಸುತ ॥ ೨ ॥

Sri Vidyabharathi Book Centre, Sringeri

CC-O. In Public Domain. Digitized by eGangotri

(ಆದಿಶಕ್ತಿ)

ತನು ಎಂಬ ತಂಬೂರಿ
ಮನವೆಂಬ ಶ್ರುತಿ ಸೇರಿ
ಆದಿಶಕ್ತಿಯಲ್ಲಿ ಭಕ್ತಿಯಿಂದ ಪಾಡುವಾ ॥ ಪ ॥

ಸವದತ್ತಿ ಕ್ಷೇತ್ರದ ಎಲ್ಲಮ್ಮನಾದಿ
ಪರುಶುರಾಮನ ನೀ ನೀಡಿದಿ
ಮೈಸೂರ ಚಾಮುಂಡಿ ಜ್ವಾಲಾಮುಖಿ ಚಂಡಿ
ಮಹಿಷಾಸುರನ ನೀ ಮರ್ದಿಸಿದಿ ॥ ೧ ॥

ಶಿರಸಿಯ ವನಸಿರಿ ಶ್ರೀ ಮಾರಿಕಾಂಬೆ
ಕೋಲೂರ ಮಾತೆ ಮೂಕಾಂಬಿಕೆ
ಬಾದಾಮಿ ಬನಶಂಕರಿ ಅಭಯಂಕರಿ
ಹೇ ದುರ್ಗೆ ಶಕ್ತಿ ಪರಮೇಶ್ವರಿ ॥ ೨ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಕನ್ನಡದ ಕುಲದೇವಿ

(ಹಂಪೆ)

ಕನ್ನಡದ ಕುಲದೇವಿ ಆಲಿಸು
ಪಾಲಿಸು ಭುವನೇಶ್ವರಿ
ವಿಜಯವಿರುಪಾಕ್ಷೇಶನ
ವಲ್ಲಭೆ ಪರಮೇಶ್ವರಿ ॥ ಪ ॥

ವಿಜಯನಗರದಿ ಬಲು ಸಡಗರದಿ
ನೆಲೆಸಿರುವ ಚಿರವೈಭವ
ಕನ್ನಡದ ಕುಲಕೋಟಿಗೆ
ಹಿರಿಯ ಹೆಮ್ಮೆಯ ಹೆಮ್ಮರ ॥ ೧ ॥

ನಿನ್ನ ಸಿರಿ ಕರುನಾಡು ಮೆರೆಯಿತು
ತ್ರಿಭುವನದಿ ಜನಮನದಲಿ
ಮುತ್ತು ರತ್ನಗಳನ್ನು ಅಳೆದರು
ಬಳ್ಳದಲಿ ಮನ ಸೆಳೆದರು ॥ ೨ ॥

ವರುಷವರುಷಕೆ ಹೊಸತು ಹರುಷವ
ವಿಜಯದಶಮಿಯು ತರುತಿದೆ
ನಾಡ ಹಬ್ಬದ ಅಬ್ಬರದಿ ನವ-
ಶಕ್ತಿ ಸ್ಫೂರ್ತಿಯು ಸಿನ್ನದೆ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಬಾ ತಾಯೆ ಬಾರೆ

(ಹಂಪೆ)

ಬಾ ತಾಯೆ ಬಾರೆ ಬಾರೆ
ಕನ್ನಡದೊಡತಿ ದಯೆ ತೋರೆ || ಪ ||

ಜಯ ಹೇ ಜಯ ಭುವನೇಶ್ವರಿ
ಜಯ ಹೇ ಜಯ ಪರಮೇಶ್ವರಿ || ಅ. ಪ. ||

ಕನ್ನಡ ನುಡಿ ಇಂಪು ಇಂಪು
ಶ್ರೀಗಂಧದ ಗಂಧ ಕಂಪು
ಕಾವೇರಿಯು ತಂಪು ತಂಪು
ಭುವನೇಶ್ವರಿ ಐಸಿರಿ ಸೊಂಪು || ೧ ||

ಹಂಪೆಯ ಗತವೈಭವದಲ್ಲಿ
ಬಂಧನಮಯ ಈ ಭವದಲ್ಲಿ
ಕನ್ನಡ ಜನ ಮೈಮನಗಳಲಿ
ಕವಿಗಳ ಸವಿ ಕಲ್ಪನೆಯಲ್ಲಿ || ೨ ||

ಜಯ ಹೇ ಕರ್ನಾಟಕಮಾತೆ
ಜಗಜ್ಜನನಿ ಮಂಗಳದಾತೆ
ದಯಮಾಡು ಕಾಪಾಡು
ಚಿನ್ನದ ನೆಲೆವೀಡು ನೂಡು || ೩ ||

CC-O. In Public Domain. Digitized by eGangotri

ದೇವಿ ದುರ್ಗೆ

(ಕಟೀಲು ಕ್ಷೇತ್ರ)

ದೇಹಿ ದೇಹಿ ದೇವಿ ದುರ್ಗೆ
ಅಮ್ಮನ ಉಡಿಲು ಕಟೀಲು ಮಡಿಲು ॥ ಪ ॥

ಅಂಬಿಕೆಯಲಿರಿಸಿರ್ದ ನಂಬಿಕೆ
ಮಿಗಿಲು ಮುಗಿಲಿಗಿಂತಲು
ಬಂದಿಹರು ನಿನ್ನನ್ನು ಸ್ಮರಿಸುತ
ಕಾಣಿಕೆಯ ಹೊಳೆ ಹರಿಸುತ ॥ ೧ ॥

ವಂದನೆಯು ಅಭಿನಂದನೀಯ
ನಂದಿನಿಯ ತಪ ವನದಲಿ
ದುರ್ಗೆ ಪರಮೇಶ್ವರಿಯ ಸನ್ನಿಧಿ
ಸಿರಿಕಟೀಲು ಮಡಿಲಿದು ॥ ೨ ॥

ಕಣ್ಣ ಮುಚ್ಚಿ ಮನದಿ ನೆನೆಯಲು
ಮೆಚ್ಚಿ ಕಣ್ಣನು ತೆರೆಯುತ
ಲಿಂಗದಲಿ ಉದ್ಭವಿಸುತ
ಮಣ್ಣ ಮಕ್ಕಳ ಕಾಯುತ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಆದಿಶಕ್ತಿ ದುರ್ಗೆ ಪರಮೇಶ್ವರಿ

(ಕಟೀಲು ಕ್ಷೇತ್ರ)

ಆದಿಶಕ್ತಿ ದುರ್ಗೆ ಪರಮೇಶ್ವರಿ
ಕಟೀಲು ಮಡಿಲಲ್ಲಿ
ಅಮ್ಮನುಡಿಯಲಿ ಮುಡಿಯ ಬಾಗಿದೆ
ವರವ ಕೊಡೇ ತಾಯಿ ॥ ಪ ॥

ಜಯಹೇ ಶಂಕರಿ ಹೇ ಅಭಯಂಕರಿ
ದುಷ್ಟರ ಸಂಹಾರಿ
ಶಿಷ್ಟರ ಸಲಹುವಳೇ ಕರುಣಾಕರಿ
ಶೌರಿ ವರಗೌರಿ ॥ ೧ ॥

ದವಸಧಾನ್ಯಫಲ ಪುಷ್ಪರಾಶಿಗಳ
ಹೊಳೆಯನೆ ಹರಿಸಿಹರು
ಭಕ್ತ ಜನರ ಸೇವೆಯನು ಸೇವಿಸಿ
ಹರಸು ಬಾರೆ ತಾಯೇ ॥ ೨ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಪುಸ್ತಕದ ಬಗೆಗೆ.....

"ಹರಿ ಹರ–ದೇವೀದರ್ಶನ"ದಲ್ಲಿ ಡಾ. ಕಟ್ಟಿ, ಕ್ಷೇತ್ರಗಳ ಬಗ್ಗೆ ಸಾಕಷ್ಟು ಅಭ್ಯಾಸ ಮಾಡಿ ಸರಳವಾದ ಶಬ್ದಜೋಡಣೆಯಿಂದ ಉತ್ತಮ ಕವನಗಳನ್ನು ರಚಿಸಿದ್ದಾರೆ. ರಸಾಯನಶಾಸ್ತ್ರದಲ್ಲಿ ಡಾಕ್ಟರೇಟ್ ಪಡೆದ ಇವರು ವಿಜ್ಞಾನ ಕ್ಷೇತ್ರದ ಜನರಿಗೆ ಸಾಹಿತ್ಯ-ಸಂಗೀತಗಳಲ್ಲಿಯೂ ಇರುವ ಪ್ರಾವೀಣ್ಯತೆಗೆ ನಿದರ್ಶನವಾಗಿದ್ದಾರೆ. ತಮಗಿರುವ ಸಂಗೀತದ ಜ್ಞಾನದಿಂದಾಗಿ ಈ ಕವನಗಳನ್ನು ಒಳ್ಳೆಯ ರಾಗ ಸಂಯೋಜನೆ ಆಗುವಂತೆ ಬರೆದಿದ್ದು, ಇವುಗಳು ಜನಮನವನ್ನು ಗೆದ್ದುಕೊಳ್ಳುವುದರಲ್ಲಿ ಸಂದೇಹವಿಲ್ಲ. ಹೀಗೆಯೇ ಮುಂದುವರಿದು ಈ ಕ್ಷೇತ್ರದಲ್ಲಿಯೂ ಕಟ್ಟಿಯವರು ಡಾಕ್ಟರೇಟ್ ಪಡೆಯುವಂತಾಗಲಿ.

—ಪದ್ಮಶ್ರೀ ಪಂಡಿತ ಬಸವರಾಜ ರಾಜಗುರು

ಶ್ರೀ ರಾಘವೇಂದ್ರರ ಪ್ರಸಾದವೆನಿಸಿ ಸಂಗೀತ ಸರಸ್ವತಿಯೆ ಮಗಳಾಗಿ ಜನಿಸಿದ ಭಾಗ್ಯವಂತ ಶ್ರೀ ಎಚ್. ಎ. ಕಟ್ಟಿಯವರು ವಿಜ್ಞಾನಶಾಸ್ತ್ರ ಪಾರಂಗತರು. ಅವರು ಬರೆದ "ಹರಿ-ಹರ–ದೇವೀದರ್ಶನ" ಸಂಗೀತ ಸರಸ್ವತಿಯ ಪ್ರೇರಣೆಯೇ ಹೊರತು ಬೇರೊಂದಿಲ್ಲ ಎನ್ನುವುದು ಓದಿದ ಕೂಡಲೇ ಮೂಡಿದ ವಿಶ್ವಾಸ. ಈಗಾಗಲೇ ಇವರ ರೇಣುಕೆಯ ಭಕ್ತಿಗೀತಗಳು ಹೆಸರುಗಳಿಸಿವೆ. ಸಂಗೀತಕಾರರಿಗೆ ರಸದೂಟ ನೀಡುವ 'ಹರಿ-ಹರ-ದೇವೀದರ್ಶನ'ದಲ್ಲಿ ಶಿಲ್ಪಕಲೆ, ಸೃಷ್ಟಿಸೌಂದರ್ಯ, ಸಿರಿ, ಭಕ್ತಿ-ಭಾವಗಳು ತುಂಬಿ ಮನ ಸೂರೆಗೊಳ್ಳುತ್ತವೆ. ಈ ಕವನಸಂಕಲನ ಜನಪ್ರಿಯವಾಗುವಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

—ವ್ಹಿ. ಸಿ. ಐರಸಂಗ

Sri Vidyabharathi Book Centre, Sringeri

CC-O. In Public Domain. Digitized by eGangotri

ಆಸ್ತಿಕರಿಗೆ ಆಸಕ್ತಿದಾಯಕ

ಡಾ. ಹೆಚ್. ಎ. ಕಟ್ಟಯವರ ಕವನಸಂಕಲನ 'ಹರಿ-ಹರ-ದೇವೀ-ದರ್ಶನ' ಆಸ್ತಿಕರ ಪಾಲಿಗೊಂದು ಅಪೂರ್ವ ಆಸ್ತಿಯೆನಿಸಿದರೆ ಅಚ್ಚರಿಯೇನಿಲ್ಲ.

ಪ್ರಥಮ ಕವನದಲ್ಲಿಯೇ ಕಟ್ಟಯವರ ಅಕ್ಷರಜೋಡಿಕೆ, ಪದಪೋಣಿಕೆ, ಲಯಜಾಣ್ಮೆ, ತ್ರಾಸನೆನಿಸದ ಪ್ರಾಸ ಗಮನಾರ್ಹವೆನಿಸುತ್ತವೆ. ಅವರ ಸಂಗೀತ-ಜ್ಞಾನದ ಪರಿಚಯವೂ ಆಗುತ್ತದೆ. ಸಾಮಾನ್ಯವಾಗಿ ನಾಲ್ಕು ಸಾಲುಗಳ ಈ ಉಪಾಸನಾ ಗೀತೆಗಳ ಉಪಯುಕ್ತತೆಯನ್ನು ಕ್ರಮೇಣ ಧ್ವನಿಸುರುಳಿ ಕಂಪೆನಿಗಳವರು ಮನಗಾಣಬಹುದು. ಇಲ್ಲಿ ವರ್ಣಿತವಾಗಿರುವ ಕ್ಷೇತ್ರಗಳ ಧರ್ಮಾಧಿಕಾರಿಗಳೂ ಇತ್ತ ಗಮನಹರಿಸಬಹುದಾಗಿದೆ.

ರಸಾಯನಶಾಸ್ತ್ರದ ಪ್ರಾಧ್ಯಾಪಕರೊಬ್ಬರು ಭಕ್ತಿಗೀತಗಳ ಗುಚ್ಛವನ್ನು ಆಸ್ತಿಕರಿಗೆ ಅರ್ಪಿಸುತ್ತಿರುವುದು ಅಭಿಮಾನದ ಸಂಗತಿ. ಆಕ್ರೋಶದ, ಹತಾಶಯ, ತಬ್ಬಲಿತನದ ಕವನಗಳು ಸಂತೆಯ ಸರಕಿನಂತೆ ದೊಪದೊಪನೆ ಗುದ್ದುವಾಗುವ, ಖಾಲಿಯಾಗುವ ಇಂದಿನ ದಿನಗಳಲ್ಲಿ—ಜಾಡು ಬದಲಿಸಿದ ಕಟ್ಟಯವರದು ಗಟ್ಟಿ ಪ್ರಯತ್ನ. ಧರ್ಮ, ದೇವರು, ಆರಾಧನೆಗಳೆಲ್ಲ ಪೂರ್ವಗ್ರಹ ಪೀಡಿತರ ವ್ಯಗ್ರತೆಗೆ ಗುರಿಯಾಗುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಕಟ್ಟಯವರು ದಿಟ್ಟ ಹಾದಿ ತುಳಿದಿದ್ದಾರೆ.

ಇಲ್ಲಿ ನಿರೂಪಿತವಾಗಿರುವ ಸಾಲುಗಳನ್ನು ಓದುವಾಗ ಇವರಿಗಿರುವ ಕ್ಷೇತ್ರಪರಿಚಯವೂ ಸ್ಪಷ್ಟವಾಗುತ್ತದೆ. ಸ್ವತಃ ಸಂದರ್ಶಿಸಿ, ಅಧ್ಯಯನ ನಡೆಸಿರುವುದರಿಂದಲೇ ಅಯಾಯ ದೇವ, ದೇವತೆಯರ ಆಕರ್ಷಕ ವರ್ಣನೆ ಸಾಧ್ಯವಾಗಿದೆ. ಕರ್ನಾಟಕದ ಪ್ರಮುಖ ಪುಣ್ಯಕ್ಷೇತ್ರಗಳ ಬಗೆಗೆ ಹಾಡುಗಳನ್ನು ರಚಿಸಿ, ಇವರು ಆಸ್ತಿಕವರ್ಗ ಹಾಗು ಕವನಾಸಕ್ತ ವರ್ಗಗಳೆರಡಕ್ಕೂ ಮಹತ್ವದ ಕೊಡುಗೆ ನೀಡಿದ್ದಾರೆ.

ಇಂದು ಇವನ್ನೆಲ್ಲ ಆಸಕ್ತಿಯಿಂದ ಓದುವ ನಾವು—ನಾಳೆ ಈ ಕವನಗಳನ್ನು ಇಂಪಾದ ಕಂಠಗಳಿಂದ ಕೇಳುವಂತಾಗಲಿ. ಈ ಎಲ್ಲ ಶಕ್ತಿಕ್ಷೇತ್ರಗಳ ದೇವ ದೇವಿಯರು ಈ ಕವಿಯ ಲೇಖನಿಗೆ ಶಕ್ತಿ ತುಂಬಲಿ. ಇದು ನನ್ನ ಆತ್ಮೀಯ ಅನಿಸಿಕೆ.

—ಅರೂರು ಲಕ್ಷ್ಮಣ ಶೇಟ್

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಡಾ. ಎಚ್. ಎ. ಕಟ್ಟಿ

ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ ರಸಾಯನಶಾಸ್ತ್ರ ವಿಭಾಗದಲ್ಲಿ ರೀಡರ್ ಆಗಿ ಕಾರ್ಯನಿರ್ವಹಿಸುತ್ತಿರುವ ಡಾ ಕಟ್ಟಿ. ಯವರು ಬಾಲ್ಯದಿಂದಲೇ ಸಂಗೀತ ಹಾಗು ಸಾಹಿತ್ಯವನ್ನು ಹವ್ಯಾಸವಾಗಿ ರೂಪಿಸಿ. ಕೊಂಡು ಬಂದಿದ್ದಾರೆ.

ಪಿಎಚ್. ಡಿ. ಪದವೀಧರರಾದ ಇವರು ಒಳ್ಳೆಯ ಸಂಶೋಧಕರಾಗಿ ಕಾರ್ಯ ಮಾಡಿ. ದವರು. ಉತ್ತಮ ವಾಗ್ಮಿಗಳಾಗಿದ್ದು ಆಕಾಶವಾಣಿಯಿಂದ ಇವರ ಅನೇಕ ವೈಜ್ಞಾನಿಕ ಹಾಗು ಸಾಮಾಜಿಕ ಲೇಖನಗಳು ಬಿತ್ತರಿಸಲ್ಪಟ್ಟಿವೆ. ಸಂಗೀತ. ದಲ್ಲಿ ವಿಶೇಷ ಆಸಕ್ತಿ ಹೊಂದಿರುವುದರಿಂದ ಸುಗಮ ಸಂಗೀತಕ್ಕೆ, ಜನರ ರುಚಿಗೆ ಅನುಗುಣವಾದ ಕವನ ರಚನೆ, ರಾಗ ಸಂಯೋಜನೆ ಮಾಡುವುದು ಇವರ ಆಚ್ಚುಮೆಚ್ಚಿನ ಕೆಲಸ.

ಅನೇಕ ಸಾಂಸ್ಕೃತಿಕ ಸಂಘ-ಸಂಸ್ಥೆಗಳೊಂದಿಗೆ ನಿಕಟಸಂಬಂಧವಿರಿಸಿ. ಕೊಂಡು ಕಲೆ ಹಾಗು ಕಲಾವಿದರ ಬಗ್ಗೆ ವಿಶೇಷ ಆಸಕ್ತಿ ತೋರಿದ್ದಾರೆ. ಪಂ. ಬಸವರಾಜ ರಾಜಗುರುಗಳಂಥ ಸಂಗೀತ ದಿಗ್ಗಜರ ಜೀವನಪರಿಚಯ. ಗಳನ್ನು ಬರೆದ ಇವರು ಒಳ್ಳೆಯ ವಿಮರ್ಶಕರು ಕೂಡ. ವಿಜ್ಞಾನ ವಿಷಯ ಗಳನ್ನು ಕನ್ನಡದಲ್ಲಿ ಸರಳವಾಗಿ ಬಿಂಬಿಸುವ ಅಭ್ಯಾಸ ಪುಸ್ತಕಗಳನ್ನು ಬೇರೆ ಬೇರೆ ತರಗತಿಗಳಿಗೆ ಬರೆದಿದ್ದಾರೆ.

Hari-Hara-Devi-Darshana-s-Re 7-00
Sri Vijayabharathi Book Centre, Srisailam